ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 4 | ಸಂಚಿಕೆ 4 | ಜನವರಿ 24, 1982 | ಬೆಲೆ : 60 ಪೈ.

ದಮನ ನೀತಿಗೆ ಉತ್ತರ

1982 ಜನವರಿ 19 ಭಾರತ ದೇಶದ ಚರಿತ್ರೆಯ ಪುಟಗಳಲ್ಲಿ ಕೆಂಪು ಅಕ್ಷರಗಳಲ್ಲಿ ಬರೆಯುವಂತೆ ದೇಶದ ಕಾರ್ಮಿಕವರ್ಗ ಮಾಡಿದೆ. ಕಾಂಗ್ರೆಸ್ (ಐ) ಸರ್ಕಾರದ ಕಾರ್ಮಿಕ ವಿರೋಧಿ, ಜನವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ಧೋರಣೆಗಳನ್ನು ಪ್ರತಿಭಟಿಸಲು ಮತ್ತು ಬೆಲೆಏರಿಕೆಯಂತಹ ಸಮಸ್ಯೆಯನ್ನು ನಿವಾರಿಸಲೂ, ರೈತರ ಬೆಳೆಗೆ ನ್ಯಾಯವಾದ ಲಾಭದಾಯಕ ಬೆಲೆ ದೊರಕಿಸುವಂತೆ ಒತ್ತಾಯಿಸಲೂ ಜನವರಿ 19ರಂದು ಒಂದು ದಿನದ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಹೋರಾಟ ಸಮಿತಿ (ನೇಷನಲ್ ಕೇಂಪೇನ್ ಸಮಿತಿ)ಯು ಕರೆ ನೀಡಿತ್ತು. ಸಂಘಟಿತ ಕಾರ್ಮಿಕ ವರ್ಗವು ಒಂದಾಗಿ, ತಮ್ಮ ಆರ್ಥಿಕ ಬೇಡಿಕೆಗಳನ್ನು ಮುಂದಿಡುವುದಕ್ಕೆ ಬದಲು, ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿಯೂ, ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿಯೂ ಹೋರಾಡಲು ಮುಂದೆ ಬಂದಿರುವುದು ಇಂದಿರಾ ಕಾಂಗ್ರೆಸ್ ಸರಕಾರಕ್ಕೆ ದೊಡ್ಡ ಸವಾಲಾಗಿ ಬಂತು. ಎಲ್ಲ ಜನತೆಯ ಅತೃಪ್ತಿ ಮತ್ತು ಹೋರಾಟಗಳಿಗೆ ನೇತೃತ್ವವನ್ನೀಯಲು ಕಾರ್ಮಿಕವರ್ಗವು ಮುಂದಾಗುವುದರಲ್ಲಿ ಒಂದು ಮಹತ್ವದ ಹೆಜ್ಜೆಯಾದ 19ರ ಸಾರ್ವತ್ರಿಕ ಮುಷ್ಕರವನ್ನು ಹೇಗಾದರೂ ಮಾಡಿ ಬಗ್ಗುಬಡಿಯುವುದು ಕಾಂಗ್ರೆ ಸರಕಾರದ ಉದ್ದೇಶವಾಗಿತ್ತು.

ಸಾರ್ವತ್ರಿಕ ಮಹಾ ಮುಷ್ಕರವನ್ನು ಮುರಿಯುವ ಉದ್ದೇಶದಿಂದ ಕೇಂದ್ರ ಸರಕಾರ ಮತ್ತು ಕಾಂಗ್ರೆ ರಾಜ್ಯಸರಕಾರಗಳು ಶತಪ್ರಯತ್ನ ನಡೆಸಿದುವು. ಸಾರ್ವತ್ರಿಕ ಮುಷ್ಕರವನ್ನು "ಭಾರತ್ ಬಂದ್" ಎಂದು ಪ್ರಚಾರ ಮಾಡಿ, ಇದು ದೇಶದ್ರೋಹ ಎಂಬುದಾಗಿ ಆಕಾಶವಾಣಿ,

ಸಂಪಾದಕೀಯ

ಟೆಲಿವಿಷನ್ ಮತ್ತು ಸರಕಾರಿ ಮಾಧ್ಯಮಗಳ ಮೂಲಕ ಪ್ರಚಾರ ನಡೆಸಿ ಜನರಲ್ಲಿ ಗೊಂದಲವನ್ನುಂಟುಮಾಡಿ ಅವರನ್ನು ತಪ್ಪುದಾರಿಗೆಳೆಯಲು ಪ್ರಯತ್ನಿಸಲಾಯಿತು. ಜರ್ಮನಿಯ ನಾಜಿ ಹಿಟ್ಲರನ ಗೋಎಬೆಲ್ ಪ್ರಚಾರವನ್ನೂ ಮೀರುವಂತೆ ಆಕಾಶವಾಣಿಯ ಮೂಲಕ ಸುಳ್ಳು ವಾರ್ತೆಗಳನ್ನು ಬಿತ್ತರಿಸಲಾಯಿತು. ರಾಷ್ಟ್ರದಾದ್ಯಂತ ಸಹಸ್ರಾರು ಮಂದಿ ಕಾರ್ಮಿಕ ಮುಖಂಡರು ಮತ್ತು ಕಾರ್ಯಕರ್ತರುಗಳ ಬಂಧನ ನಡೆಯಿತು. ಇಡೀ ದೇಶದಲ್ಲಿ 50.000ಕ್ಕಿಂತಲೂ ಹೆಚ್ಚಿಗೆ ಬಂಧನ ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲೂ ಆರೇಳು ಸಾವಿರ ಮಂದಿಯನ್ನು ಬಂಧಿಸಲಾಯಿತು. ಸರಕಾರಿ ನೌಕರರು, ಸರಕಾರಿ ಮತ್ತು ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಮತ್ತಿತರರಿಗೆ ಭಯ ಹುಟ್ಟಿಸಲಾಯಿತು. ಹಿಂದೆಂದೂ ಕಾಣದಷ್ಟು ಪೋಲೀಸು ಪಡೆಗಳನ್ನು ಜನರ ಮೇಲೆ ಛೂ ಬಿಡಲು ಸಜ್ಜುಗೊಳಿಸಲಾಯಿತು.

ಕಾರ್ಮಿಕವರ್ಗದ ಸವಾಲನ್ನು ಎದುರಿಸಲು ಇಂದಿರಾಗಾಂಧಿಯವರು ಮತ್ತೆ 20 ಅಂಶದ ಕಾರ್ಯಕ್ರಮವನ್ನು ಘೋಷಿಸಿದರು. ಮತ್ತೆ ಹಳ್ಳಿ ರಾಗಹಲ್ಲಿ ದುಡಿಯುವ ಜನತೆ, ಜನಸಾಮಾನ್ಯರು ಮತ್ತು ದಲಿತರ ಬಗ್ಗೆ ತಮ್ಮ ಕಾರ್ಯಕ್ರಮ ಇರುವುದಾಗಿ ಸಾರಿದರು. ಅಧಿಕಾರದ ಬಲ, ಸರಕಾರಿಯಂತ್ರದ ಪೂರ್ಣ ಬಳಕೆ, ರಾಜಕೀಯ ಪೊಳ್ಳು ಘೋಷಣೆಗಳ ಮೂಲಕ ಮುಷ್ಕರವನ್ನು ಬಗ್ಗುಬಡಿಯಲು ಕಾಂಗ್ರೆ ಆಡಳಿತಗಾರರು ಅದೆಷ್ಟೇ ಪ್ರಯತ್ನ ನಡೆಸಿದರೂ ದೇಶದ ಕಾರ್ಮಿಕ ವರ್ಗ ಮುಷ್ಕರವನ್ನು ಯಶಸ್ವಿಗೊಳಿಸಿತು! ರೈಲ್ವೆ, ಅಂಚೆ-ತಂತಿ ನೌಕರರು, ರಸ್ತೆ ಸಾರಿಗೆಯವರು ಮತ್ತು ಸರಕಾರಿ ನೌಕರರು ಮುಷ್ಕರದಲ್ಲಿ ಭಾಗವಹಿಸಿಲ್ಲವಾದರೂ ಮುಷ್ಕರಕ್ಕೆ ತಮ್ಮ ಸೌಹಾರ್ದತೆ ತೋರಿಸಿದರು.

[ಕಡೇ ಪುಟ ನೋಡಿ]

ಸಂಪೂರ್ಣ ಯಶಸ್ವಿಯಾದ ಜ. ೧೯ರ ಮಹಾಮುಷ್ಕರ

ರಾಷ್ಟ್ರೀಯ ಆಂದೋಲನ ಸಮಿತಿಯು ಕರೆಯಂತೆ ದೇಶದಾದ್ಯಂತ ಜನವರಿ 19ರಂದು ನಡೆದ ಸಾರ್ವತ್ರಿಕ ಮುಷ್ಕರ ಅಭೂತಪೂರ್ವ ಯಶಸ್ಸನ್ನು ಪಡೆಯಿತು. ಮುಷ್ಕರ ನಡೆಯದಂತೆ ಮಾಡಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಲಾಗ ಹಾಕಿದರೂ ಮುಷ್ಕರ ನಡೆಯಿತು. ಕರಾಳ ಕಾನೂನುಗಳ ವಿರುದ್ಧ, ಮತ್ತಿತರ ಬೇಡಿಕೆಗಳಿಗೋಸ್ಕರ ಈ ಮಹಾ ಮುಷ್ಕರ ನಡೆಯಿತು. ರೇಡಿಯೋ, ಟಿ.ವಿ. ಮೊದಲಾದ ಮಾಧ್ಯಮಗಳ ಮೂಲಕ ಪ್ರಧಾನ ಮಂತ್ರಿ, ಗೃಹಮಂತ್ರಿ, ಮುಖ್ಯಮಂತ್ರಿ, ಉಚ್ಚ ಪೋಲೀಸ್ ಅಧಿಕಾರಿಗಳು ಮುಷ್ಕರಕ್ಕೆ ಓಗೊಡದಂತೆ ಕಾರ್ಮಿಕವರ್ಗಕ್ಕೆ ಅವಿರತ ಮನವಿ ಮಾಡಿಕೊಂಡರೂ ಮುಷ್ಕರ ನಡೆಯಿತು.

"ತಮ್ಮ ಕಾಲುಗಳಡಿಯಲ್ಲಿ ದೇಶದ ಜನತೆಯು ದಿನರಾತ್ರಿಗಳ ಅಭ್ಯಪ್ತ ಮಲಗಿಲ್ಲ; ಈ ದೇಶ ತಮ್ಮ ಪೀಳಿಗೆಯ ಜಾಹೀರು ಅಲ್ಲ. ಬದಲಾಗಿ ನೂರಾರು ಪೀಳಿಗೆಗಳ ದುಡಿಮೆ ಈ ದೇಶವನ್ನು ಸಿಂಗರಿಸಿದೆ ಎಂಬುದನ್ನು ದೇಶದ ಶ್ರಮಜೀವಿಗಳು ಶ್ರೀಮತಿ ಗಾಂಧಿಯವರಿಗೆ ಮನದಟ್ಟು ಮಾಡಿಕೊಟ್ಟಿದ್ದಾರೆ".

"ಸಾವಿರ ಸಿಡಿಲು ಬೀಳಲಿ, ಲಕ್ಷ ಬಿರುಗಾಳಿ ಬೀಸಲಿ ಯಾವ ಹೂಗಳು ಅರಳಬೇಕೆಂದಿದೆಯೋ ಅವು ಅರಳಿಯೇ ತೀರುವುವು ಎಂದು ಒಂದೆಡೆ ಕವಿ ಸಾಹಿರ್ ಹೇಳಿದ್ದರು. ಕ್ಷಿಪ್ರಕ್ರಾಂತಿ ಎದುರಿಸುವ ರೀತಿಯಲ್ಲಿ ಮುಷ್ಕರ ತಡೆಯಲು ದಮನಕಾಂಡ ನಡೆಯಿತು; ಬಂಧನಸತ್ರ ನಡೆಯಿತು. ಆದರೆ ಹೋರಾಟವೇ ದಾರಿ ಎಂದು ಕೊನೆಗೂ ಕಂಡುಕೊಂಡ ಕಾರ್ಮಿಕವರ್ಗ ಮುಷ್ಕರವನ್ನು ಪ್ರಚಂಡ ಯಶಸ್ವಿಗೊಳಿಸಿತು".

ಮುಷ್ಕರ ಹೂಡುವುದು, ಉತ್ಪಾದನೆ ನಿಲ್ಲಿಸುವುದು ರಾಷ್ಟ್ರದ್ರೋಹ ಎಂದು ಅವಿರತ ಪ್ರಚಾರ ನಡೆಸಿ ಸಾರ್ವಜನಿಕರನ್ನು ತಪ್ಪುದಾರಿಗೆಳೆಯಲು ಹವಣಿಸಲಾಯಿತು. ಔದ್ಯೋಗಿಕ ಮುಷ್ಕರವನ್ನು 'ಭಾರತ್ ಬಂದ್' ಎಂಬುದಾಗಿ ಬಣ್ಣಿಸಲಾಯಿತು. ಅಸ್ತಿತ್ವದಲ್ಲಿ ಇಲ್ಲದ ಸಂಘಸಂಸ್ಥೆಗಳನ್ನು ದಿಢೀರ್ ಆಗಿ ಹುಟ್ಟುಹಾಕಿ ಅವುಗಳ ಮುಖಾಂತರ ಮುಷ್ಕರವನ್ನು ವಿರೋಧಿಸುವ ಹೇಳಿಕೆಗಳನ್ನು ಕೊಡಿಸಲಾಯಿತು. ಒಂದು ದಿನ (ಜ. 19) ಕೆಲಸಕ್ಕೆ ಬಾರದಿದ್ದಲ್ಲಿ ಎಂಟು ದಿನ ಸಂಬಳ ಕಡಿತ ಮಾಡುವದಾಗಿ ಆಡಳಿತ ವರ್ಗಗಳಷ್ಟೇ ಅಲ್ಲ, ರಾಜ್ಯ ಸರಕಾರದ ಕಾರ್ಮಿಕ ಮಂತ್ರಿಗಳೂ ಎಚ್ಚರಿಸಿದರು. ಅಲ್ಲದೇ ಮುಷ್ಕರದಲ್ಲಿ ಭಾಗವಹಿಸುವ ಕಾರ್ಮಿಕರ ವಿರುದ್ಧ ಕೈಗಾರಿಕಾ ವಿವಾದಗಳ ಕಾಯಿದೆ ಹಾಗೂ ಪ್ರಸಕ್ತ ಜಾರಿಯಲ್ಲಿರುವ ಆಜ್ಞೆಗಳನ್ವಯ ಕ್ರಮಕೈಕೊಳ್ಳಲಾಗುವದೆಂದು ರಾಜ್ಯ (ಕರ್ನಾಟಕ) ಸರಕಾರ ಅಧಿಕೃತ ಪ್ರಕಟನೆಯನ್ನೇ ಹೊರಡಿಸಿದ್ದವು. ಕಳೆದ ವರ್ಷ ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರು ಸುಮಾರು 70ದಿನ ಮುಷ್ಕರ ಹೂಡಿದಾಗ ಉತ್ಪಾದನೆ ಬಗ್ಗೆ ಕಿಂಚಿತ್ತೂ ಕಾಳಜಿವಹಿಸದ ಸರಕಾರ ಉತ್ಪಾದನೆ ನಿಲ್ಲಿಸುವದು ರಾಷ್ಟ್ರದ್ರೋಹ ಎಂದು ಬಣ್ಣಿಸಿತು. ಆದರೂ ಸಮಸ್ತ ಕಾರ್ಮಿಕವರ್ಗ ಈ ಬೆದರಿಕೆಗಳನ್ನು ಕಡೆಗಣಿಸಿ ಮುಷ್ಕರವನ್ನು ಯಶಸ್ವಿಗೊಳಿಸಿತು.

ದೇಶದ (ಕು) ಖ್ಯಾತ ಬಂಡವಾಳಗಾರರು ಮುಷ್ಕರ ಸದೆ ಬಡಿಯಲು ಕಂಕಣಬದ್ಧರಾಗಿದ್ದರು. ಸರ್ಕಾರ ಸರ್ವರೀತಿಯ ಸಹಾಯದ ಅಭಯ ಹಸ್ತವನ್ನು ಅವರಿಗೆ ನೀಡಿತು. (ಬಿರ್ಲಾ ಸಂಸ್ಥೆಯ ಕಾನೂನು ಸಲಹೆಗಾರರು ತಮ್ಮ ಘಟಕಗಳಿಗೆಲ್ಲ ತಂತೀ ಸಂದೇಶ ಕಳಿಸಿ ಮುಷ್ಕರ ಹತ್ತಿಕ್ಕಲು ಆಜ್ಞೆ ಹೊರಡಿಸಿದ್ದರು. ಈ ತಂತೀ ಸಂದೇಶದ ಪ್ರತಿಯನ್ನು ಈ ಕೆಳಕಾಣಿಸಿದ ಅಂಕಣದಲ್ಲಿ ನಾವು ಅಚ್ಚು ಮಾಡಿಸಿ ಮುದ್ರಿಸಿದ್ದೇವೆ.

ERE POLYFIB BG

POLYFIBER

4 14/15-1-82

SHRI KI PHILIP/SHAILENDRA JAIN/SUBHASH JAIN
HARIHAR

SINCE GOVERNMENT OF INDIA WANTS THAT THE ALL INDIA STRIKE SCHEDULED FOR 19TH SHOULD NOT BE SUCCESSFUL AND SINCE KARNATAKA GOVT IS GONG ((I) GOVERNMENT, YOU SHOULD TAKE ALL POSSIBLE HELPFROM THE KARNATAKA GOVT I.E. CHIEF MINISTER AND THE CHIEF SECRETARY, TO SEE THAT OUR PLANT RUNS FULLY. DON'T MAKE MISTAKE ABOUT IT. SUBHASH JAIN SHOULD IMMDTLY GO TO THE CHIEF MINISTER AND HE+THE CHIEF SECRETARY TO DISCUSS ABOUT THE +THIS AND MAKE ALL POSSIBLE ARRN+ARRANGEMENTS TO SEE THAT OUR PLANTS RUN FULLY ON THE 19TH. TREAT THIS AS MOST URGENT.

MANDELIA:DELHI

POLYFIBER

[ಕಡೇ ಪುಟ ನೋಡಿ]

-ಕೆವಿ

ಕೋಪನ್ ಹೇಗನ್‌ದಿಂದ ಪ್ಯಾರೀಸ್‌ನವರೆಗೆ

ಯುರೋಪಿನ ಎಲ್ಲೆಡೆ ಶಾಂತಿ ಯಾತ್ರೆಗಳು

ರೇಗನ್‌ರ ನ್ಯೂಟ್ರಾನ್ ಯುದ್ಧ ನೀತಿಗೆ ಧಿಕ್ಕಾರ!

(ಹಿಂದಿನ ಪುಟದಿಂದ)

"ನಾವು ಜಯಿಸುವೆವು"

ರೇಗನ್‌ರ 'ಸೀಮಿತ ಯುದ್ಧ'ದ ರಣಾಂಗಣವಾಗಬಹುದಾದ ಪಶ್ಚಿಮ ಜರ್ಮನಿಯಲ್ಲೂ ಜನಸಾಮಾನ್ಯರು ಅಷ್ಟೇ ಧೃಢವಾಗಿ ಸ್ಪಷ್ಟವಾಗಿ ರೇಗನ್ ನೀತಿಗೆ ತಮ್ಮ ಧಿಕ್ಕಾರವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಪಶ್ಚಿಮ ಜರ್ಮನಿಯ ರಾಜಧಾನಿಯಲ್ಲಿ ಸುಮಾರು 3 ಲಕ್ಷ ಜನ ಅಕ್ಟೋಬರ್ 10ರಂದು ನೆರೆದಿದ್ದರು. ಹೀಗೆ ತಮ್ಮ ತೀವ್ರ ವಿರೋಧವನ್ನು ವ್ಯಕ್ತಗೊಳಿಸಲು ನೆರೆದಿದ್ದವರಲ್ಲಿ ಪಶ್ಚಿಮ ಜರ್ಮನಿಯ ಎಲ್ಲಾ ವಯೋಗುಂಪಿನ ಎಲ್ಲಾ ರಾಜಕೀಯ ನಿಲುವುಗಳ ನಾಗರಿಕರು ಮಾತ್ರವಲ್ಲ ಬ್ರಿಟನ್, ಫ್ರಾನ್ಸ್ ಇಟಲಿ, ನೆದರ್‌ಲ್ಯಾಂಡ್ ಬೆಲ್ಜಿಯಂ ಹಾಗೂ ಸ್ಕ್ಯಾಂಡಿನೇವಿಯಾ ಇತ್ಯಾದಿ ಪಶ್ಚಿಮ ಯುರೋಪಿನ ಇತರ ದೇಶಗಳ ಶಾಂತಿಯಾತ್ರಿಗಳೂ ಇದ್ದರೆಂಬುದು ಗಮನಾರ್ಹ. ಇದುವರೆಗೆ ಇಷ್ಟೊಂದು ಅಗಾಧ ಸಂಖ್ಯೆಯಲ್ಲಿ ಜನ ಸೇರಿ ಮತಪ್ರದರ್ಶನ ಮಾಡಿರುವುದನ್ನು ಬಾನ್ ನಗರ ಕಂಡೇ ಇಲ್ಲ ಎಂದು ಪತ್ರಕರ್ತರು ಇದನ್ನು ವರ್ಣಿಸಿದ್ದಾರೆ. ಅಮೇರಿಕಾದಲ್ಲಿಯಂತೆ ಇಲ್ಲೂ ಜನ ಅಷ್ಟೊಂದು ಅಪಾರ ಸಂಖ್ಯೆಯಲ್ಲಿ ಸೇರಿದ್ದರೂ ಶಿಸ್ತುಬದ್ಧವಾಗಿ ಏನೊಂದೂ ಅಹಿತಕರ ಘಟನೆಯಿಲ್ಲದೆ, ಪೋಲೀಸಿನ ಅಗತ್ಯವೂ ಇಲ್ಲದೆ ಈ ಮತಪ್ರದರ್ಶನ ನಡೆಯಿತು. ಪಶ್ಚಿಮ ಜರ್ಮನಿಯ ಆಡಳಿತ ಕೂಟ ಈ ಪ್ರದರ್ಶನದ ವಿರುದ್ಧ ತೀವ್ರ ಬೆದರಿಕೆ, ಅಪಪ್ರಚಾರ ನಡೆಸಿದ್ದರೂ, ನಾಟೋ ಸೈನಿಕ ಬಣ ಈ ಅಪಪ್ರಚಾರಕ್ಕೆ ಸಾಕಷ್ಟು ಹಣ ಸುರಿದಿದ್ದರೂ ಇದನ್ನು ವಿಫಲಗೊಳಿಸುವುದು ಅವರಿಂದಾಗಲಿಲ್ಲ. ಆಡಳಿತ ನಡೆಸುತ್ತಿರುವ ಸಂಯುಕ್ತರಂಗದ ಪಾರ್ಲಿಮೆಂಟ್ ಸದಸ್ಯರೂ ಈ ಮತಪ್ರದರ್ಶನದಲ್ಲಿ ಭಾಗವಹಿಸಿದ್ದರು. "ರೇಗನ್, ನಿಮ್ಮ ಮಾರಕಾಸ್ತ್ರದ ಹುಚ್ಚನ್ನು ನಿಲ್ಲಿಸಿ," "ರೇಗನ್‌ರ ನ್ಯೂಟ್ರಾನ್‌ಬಾಂಬಿಗೆ ನಮ್ಮ ನಕಾರ", "ಯುರೋಪಿನಲ್ಲಿ ಶಸ್ತ್ರಾಸ್ತ್ರ ನೆಲೆಗೊಳಿಸುವುದನ್ನು ನಾವು ವಿರೋಧಿಸುತ್ತೇವೆ" ಇತ್ಯಾದಿ ಘೋಷಣಾ ಫಲಕಗಳು ಮೆರವಣಿಗೆಯಲ್ಲಿ ಎಲ್ಲೆಲ್ಲೂ ಕಾಣುತ್ತಿದ್ದವು. "ಒಂದು ವಿದೇಶೀ ಶಕ್ತಿ ಹುಬ್ಬುಗಟ್ಟಿಕ್ಕುವುದನ್ನು ನಮ್ಮ ಧೋರಣೆಯ ಅಳತೆಗೋಲಾಗಿ ಪರಿಗಣಿಸುವುದಾದರೆ ನಾವು ಅದಷ್ಟೊಂದು ತುಚ್ಛಮಟ್ಟಕ್ಕಿಳಿದಿದ್ದೇವೆ" ಎಂದೊಬ್ಬ ಭಾಷಣಕಾರರು ಈ ಸಭೆಯಲ್ಲಿ ಉದ್ಗರಿಸಿದರು. ಇನ್ನೊಬ್ಬರ ಪ್ರಶ್ನೆ "ನಾವು ಈಗ ತಾನೇ ಕಟ್ಟಿರುವ ಎಲ್ಲದರ ವಿನಾಶದಿಂದ ಮಾತ್ರ ರಕ್ಷಣೆ ಸಾಧ್ಯ ಎಂಬ ಮಾತು ನಿಜವೇ ?" ಈ ಮತಪ್ರದರ್ಶನದಲ್ಲಿ ಅಮೇರಿಕಾದ ಮಾರ್ಟಿನ್ ಲ್ಯೂಥರ್ ಕಿಂಗ್‌ರ ಪತ್ನಿ ಕೊರೆಟಾ ಕಿಂಗ್ ಹಾಗೂ ಪ್ರಖ್ಯಾತ ಗಾಯಕ ಬೆಲಾಫಾಂಡೆ ಕೂಡಾ ಭಾಗವಹಿಸಿದ್ದರು. ಬೆಲಾಫಾಂಡೆಯವರ "ನಾವು ಜಯಿಸಿಯೇ ತೀರುತ್ತೇವೆ" ಎಂಬ ಭಾವಪೂರಿತ ವಾತಾವರಣ ಸೃಷ್ಟಿಸಿತು.

ಬಾನ್ ಪ್ರತಿಭಟನಾ ಸಭೆಯಲ್ಲಿ, ಇನ್ನೊಬ್ಬ ಭಾಷಣಕಾರರೆಂದಂತೆ ಅಕ್ಟೋಬರ್ 10 ಶಾಂತಿ, ಸ್ವಾತಂತ್ರ್ಯ ಹಾಗೂ ಮಾನವ ಘನತೆಗಾಗಿ ನಡೆಸುವ ಹೋರಾಟದ ಅಂತ್ಯವಲ್ಲ, ಆರಂಭ ಮಾತ್ರ." ಅಕ್ಟೋಬರ್ 21ರಂದು ಪಶ್ಚಿಮ ಯುರೋಪಿನಾದ್ಯಂತ ಕಂಡುಬಂದ ಈ ತೀವ್ರ ವಿರೋಧಾಭಿಪ್ರಾಯವನ್ನೂ ಕಡೆಗಣಿಸಿ ನಾಟೋ ಮಿಲಿಟರಿ ಕೂಟದ ರಕ್ಷಣಾಮಂತ್ರಿಗಳು ತಮ್ಮ ದೇಶಗಳಲ್ಲಿ ಅಮೇರಿಕಾ ಪರ್ಷಿಂಗ್ II ಹಾಗೂ ಕ್ರೂಯಿಸ್ ಕ್ಷಿಪಣಿಗಳನ್ನು ನೆಲೆಗೊಳಿಸಲು ಒಪ್ಪಿಗೆ ಕೊಡುವ ದಾಖಲೆಗೆ ರುಜುಮಾಡಿದರು. ಈ ನಿರ್ಧಾರ ನ್ಯೂಟ್ರಾನ್ ಬಾಂಬ್ ವಿರೋಧೀ ಸಾಮೂಹಿಕ ಚಳುವಳಿಯನ್ನು ಸಡಿಲಗೊಳಿಸುವ ಬದಲು ಅದನ್ನು ಇನ್ನಷ್ಟು ವ್ಯಾಪಕಗೊಳಿಸಿದೆ. ಅಕ್ಟೋಬರ್ 24ರಿಂದ 31ರ ವರೆಗೆ ಸಂಯುಕ್ತ ರಾಷ್ಟ್ರ ನಿಶ್ಶಸ್ತ್ರೀಕರಣ ಸಪ್ತಾಹದಲ್ಲಿ ಪಶ್ಚಿಮ ಯುರೋಪಿನ ಎಲ್ಲಾ ದೇಶಗಳಲ್ಲಿ ಇನ್ನೂ ತೀವ್ರತರವಾದ ಪ್ರತಿಭಟನೆ ಕಂಡುಬಂದಿದೆ. ಅಕ್ಟೋಬರ್ 24ರಂದು ಲಂಡನ್ ನಗರದಲ್ಲಿ ನಡೆದ ಒಂದು ದೊಡ್ಡ ಮತಪ್ರದರ್ಶನದಲ್ಲಿ ಪರ್ಷಿಂಗ್ II ಹಾಗೂ ಕ್ರೂಯಿಸ್ ಕ್ಷಿಪಣಿಗಳನ್ನು ಪಶ್ಚಿಮ ಯುರೋಪ್‌ನ್ನು ನೆಲೆಗೊಳಿಸುವ ವಿಚಾರ ಕೈ ಬಿಡಬೇಕೆಂದು ಒತ್ತಾಯಿಸಲಾಯಿತು. ಪಶ್ಚಿಮ ಬರ್ಲಿನ್, ಪ್ಯಾರಿಸ್, ನೆದರ್‌ಲ್ಯಾಂಡ್ ಬೆಲ್ಜಿಯಂ, ಗ್ರೀಸ್ ಹೀಗೆ ಎಲ್ಲಾ ಯುರೋಪಿಯನ್ ದೇಶಗಳ ಶಾಂತಿಪ್ರಿಯ ಜನತೆ ತನ್ನ ತೀವ್ರ ಅಸಮಾಧಾನವನ್ನು ಸ್ಪಷ್ಟ ಶಬ್ದಗಳಲ್ಲಿ ವ್ಯಕ್ತಪಡಿಸಿದೆ.

ನ್ಯೂಟ್ರಾನ್ ಬಾಂಬು ಹಾಗೂ ಇತರ ಮಾರಕಾಸ್ತ್ರಗಳ ದುಷ್ಪರಿಣಾಮಗಳನ್ನು ಯುರೋಪು, ಅಮೇರಿಕಾ ಮಾತ್ರವಲ್ಲ ಜಗತ್ತಿನ ಎಲ್ಲಾ ಜನರೂ ಅನುಭವಿಸಬೇಕಾಗುತ್ತದೆ ಎಂದು ಜಗತ್ತಿನ ಎಲ್ಲ ಶಾಂತಿಪ್ರಿಯ ಶಕ್ತಿಗಳು ಮನಗಂಡಿವೆ ಅದ್ದರಿಂದಲೇ ರೇಗನ್‌ರ ನ್ಯೂಟ್ರಾನ್ ಬಾಂಬ್ ಹಾಗೂ ಇತರ ನಿರ್ಧಾರಗಳ ಬಗ್ಗೆ ಭಾರತವು ಸೇರಿದಂತೆ ಏಷ್ಯಾ ಹಾಗೂ ಆಫ್ರಿಕಾಖಂಡದ ಹಲವು ದೇಶಗಳಲ್ಲಿ ಜನ ತೀವ್ರ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ನಿಶ್ಶಸ್ತ್ರೀಕರಣದ ವಿರುದ್ಧ ಸಾಮೂಹಿಕ ಚಳವಳಿ ನ್ಯೂಟ್ರಾನ್‌ಬಾಂಬಿನ ಭಾರೀ ಅನಾಹುತ ತಪ್ಪಿಸುವುದಕ್ಕಾಗಿ ಮಾತ್ರವಲ್ಲ ಶಸ್ತ್ರಾಸ್ತ್ರಗಳಿಗಾಗಿ ಚೆಲ್ಲುತ್ತಿರುವ ಸಹಸ್ರ ಕೋಟಿಗಟ್ಟಲೆ ಡಾಲರುಗಳನ್ನು ಆರ್ಥಿಕ ಬೆಳವಣಿಗೆಗೆ, ಹಸಿದಿರುವ ಕೋಟಿಗಟ್ಟಲೆ ಜನರ ಹಸಿವು ತಣಿಸಿ ಅವರಿಗೂ ಮಾನವೀಯ ಜೀವನ ನಡೆಸಲು ಅವಕಾಶ ನೀಡಬೇಕೆನ್ನುವ ಚಳುವಳಿಯೂ ಹೌದು. ಅದೇ ರೀತಿ ಎಲ್ಲಾ ದೇಶಗಳ ಸ್ವಾತಂತ್ರ್ಯ ಹಾಗೂ ಸಾರ್ವಭೌಮತೆಯನ್ನೂ ರಕ್ಷಿಸಲಿಕ್ಕಾಗಿ ನಡೆಸುವ ಚಳವಳಿಯೂ ಹೌದು. ಯಾಕೆಂದರೆ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಶಸ್ತ್ರಾಸ್ತ್ರ ಸಂಗ್ರಹ ಹೆಚ್ಚಿದಂತೆ ಸ್ವತಂತ್ರ ದೇಶಗಳ ಮೇಲೆ, ವಿವಿಧ ಜನಾಂಗಗಳ ವಿಮೋಚನಾ ಸಮರಗಳ ಮೇಲೆ ಹೆಚ್ಚೆಚ್ಚು ಹಲ್ಲೆ ನಡೆಯಲಾರಂಭಿಸಿದೆ. ಉದಾಹರಣೆಗೆ, ಕೆರೀಬಿಯನ್ ಕ್ಷೇತ್ರದಲ್ಲಿ ಅದು ಕ್ಯೂಬಾ, ನಿಕಾರಾಗುವಾಕ್ಕೆ ಬೆದರಿಕೆಯೊಡ್ಡುತ್ತಾ ಎಲ್‌ಸಾಲ್ವಡೋರ್‌ನ ಫ್ಯಾಸಿಸ್ಟ್ ಆಡಳಿತಕ್ಕೆ ಸರ್ವ ಬೆಂಬಲ ಕೊಡುತ್ತಿದೆ. ಮಧ್ಯಪ್ರಾಚ್ಯದಲ್ಲಿ ಇಸ್ರೇಲೀ ಆಕ್ರಮಣಕಾರರಿಗೆ ಕುಮ್ಮಕ್ಕು ಕೊಡುತ್ತಿದೆ. ಅತ್ತ ದಕ್ಷಿಣ ಆಫ್ರಿಕಾ ಜನಾಂಗ ದ್ವೇಷೀ ಸರಕಾರದ ಬೆನ್ನಿಗೆ ನಿಂತು ಅಂಗೋಲಾ ಹಾಗೂ ಇತರ ದೇಶಗಳನ್ನು ಕಬಳಿಸಲು ಪ್ರಯತ್ನಿಸುತ್ತಿದೆ. ಇಲ್ಲಿ ಪಾಕಿಸ್ತಾನದ ಮಿಲಿಟರೀ ಆಡಳಿತಕ್ಕೆ ಶಸ್ತ್ರಾಸ್ತ್ರ ಕೊಟ್ಟು ಭಾರತದ ಮೇಲೆ ಬೆದರಿಕೆಯೊಡ್ಡುತ್ತಿದೆ.

ನ್ಯೂಕ್ಲಿಯರ್ ಅಸ್ತ್ರಗಳನ್ನು ಹೊಂದಿರದ ದೇಶಗಳ ವಿರುದ್ಧ ತಾವು ಅಂತಹ ಅಸ್ತ್ರಗಳನ್ನು ಉಪಯೋಗಿಸುವುದಿಲ್ಲ ಎಂದು ಕರಾರುಮಾಡಿಕೊಳ್ಳಲೂ ಸಿದ್ಧರಿರುವುದಾಗಿ ಘೋಷಿಸಿದ ಸೋವಿಯೆಟ್ ಒಕ್ಕೂಟದ ನಾಯಕರ ನಿಲುವನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳ ಧೋರಣೆಯೊಂದಿಗೆ ಹೋಲಿಸಿನೋಡಬಹುದು. "ನ್ಯೂಕ್ಲಿಯರ್ ಯುದ್ಧ ಸಂಭವಿಸದಂತೆ ಮಾಡುವುದು, ನ್ಯೂಕ್ಲಿಯರ್ ಆಘಾತಗಳನ್ನು ತಡೆಹಿಡಿಯುವುದು ಇಂತಹ ಯುದ್ಧದ ಭೀತಿಯನ್ನು ನಿವಾರಿಸುವುದು ಸೋವಿಯೆಟ್ ಒಕ್ಕೂಟದ ಉದ್ದೇಶ. ನ್ಯೂಕ್ಲಿಯರ್ ಆಯುಧಗಳನ್ನು ಪ್ರಪ್ರಥಮವಾಗಿ ಬಳಸುವುದನ್ನು ತ್ಯಜಿಸುವುದೇ ನಮ್ಮ ನಿಲುವು" ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

ಈ ಮೊದಲೇ ಹೇಳಿದಂತೆ, ರೇಗನ್‌ರ ಹುಚ್ಚುಧೋರಣೆಗಳನ್ನು ಅವರ ಮಿತ್ರರೂ ಸಮರ್ಥಿಸಿಕೊಳ್ಳಲು ಪೇಚಾಡುವಂತಾಗಿರುವಾಗ ಜಗತ್ತಿನ ಜನರನ್ನು ಇದುವರೆಗೆ ಮಾಡಿದಂತೆ ಸತತ ಅಪಪ್ರಚಾರದ ಮೂಲಕ ತಪ್ಪು ದಾರಿಗೆಳೆದು ಮೋಸಗೊಳಿಸುವುದು ದುಸ್ಸಾಧ್ಯವಾಗುತ್ತಿದೆ. ಸಾಮ್ರಾಜ್ಯಶಾಹಿಯ ಕುತಂತ್ರಗಳು ಈಗ ಎಲ್ಲರಿಗೂ ಸ್ಪಷ್ಟವಾಗಿ ತಿಳಿಯಲಾರಂಭಿಸಿವೆ. ಆದ್ದರಿಂದಲೇ ಜಾಗತಿಕ ಶಾಂತಿ ಚಳವಳಿ ದಿನದಿಂದ ದಿನಕ್ಕೆ ಪ್ರಬಲವಾಗುತ್ತಿದೆ; ಜಗತ್ತನ್ನು ತನ್ನ ಶೋಷಣೆಯ ಪಂಜಿನೊಳಗೆ ಸಿಲುಕಿಸಬೇಕು. ಸಾಧ್ಯವಾಗದಿದ್ದರೆ ಜಗತ್ತನ್ನೇ ನಾಶಮಾಡಬೇಕೆಂದು ಹವಣಿಸುತ್ತಿರುವ ಸಾಮ್ರಾಜ್ಯಶಾಹೀ ಮಹತ್ವಾಕಾಂಕ್ಷೆಗೆ ಪ್ರಬಲ ಸವಾಲನ್ನು ಒಡ್ಡುತ್ತಿದೆ.

[ಸಂಗ್ರಹ]

ಅಂಗವಿಕಲರ ಜಿಲ್ಲಾ ಸಮ್ಮೇಳನ

ಕರ್ನಾಟಕ ರಾಜ್ಯ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದ ದ. ಕ. ಜಿಲ್ಲಾ ಘಟಕದ ಆಶ್ರಯದಲ್ಲಿ ಜಿಲ್ಲಾಮಟ್ಟದ ಸಮ್ಮೇಳನವು ಡಿಸೆಂಬರ್ 26 ಮತ್ತು 27ರಂದು ಮಂಗಳೂರಿನಲ್ಲಿ ಜರುಗಿತು. ಶ್ರೀ ಯಲ್ಲೂರು ಉಮೇಶ್‌ರಾವ್ ಅವರು ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನವನ್ನು ಮಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಶೇಖ್ ಅಲಿಯವರು ಉದ್ಘಾಟಿಸಿದರು.

ಅಂಗವಿಕಲರಿಗೆ ಸಿಗುವ ಸೌಲಭ್ಯಗಳು ಮತ್ತು ಕೃತಕಾಂಗಗಳ ಬಗ್ಗೆ ವಸ್ತು ಪ್ರದರ್ಶನವನ್ನು ಡಾ॥ ಶಾಂತಾರಾಮಶೆಟ್ಟಿ ಉದ್ಘಾಟಿಸಿದರು. ಅಂಗವಿಕಲರ ಸಂಘದ ಕಾರ್ಯದರ್ಶಿ ಶ್ರೀ ವಿಶ್ವನಾಥ ವರದಿ ಮಂಡಿಸಿದರು.

ಎರಡನೇ ದಿನದ ಕಾರ್ಯಕ್ರಮದಲ್ಲಿ ಅಂಗವಿಕಲರಿಗೆ ಸರಕಾರದಿಂದ ಸಿಗುವ ಮಾಸಾಶನವನ್ನು ದೊರಕಿಸಿ ಕೊಡಲು ಡಾ॥ ಶಾಂತಾರಾಮ್‌ಶೆಟ್ಟಿ ನೇತೃತ್ವದಲ್ಲಿ ವೈದ್ಯಕೀಯ ಪ್ರಮಾಣ ಪತ್ರ, ಕೃತಕಾಂಗ ಇತರ ಸೌಲಭ್ಯಗಳನ್ನು ಒದಗಿಸಲು ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಗೆ 62 ದಾಖಲು ಪತ್ರ ಮೊದಲಾದವುಗಳನ್ನು ವಿತರಣೆ ಮಾಡಿದರು.

ಅಂದು ಸಂಜೆ (ಡಿ. 27) ನಡೆದ ಸಮಾರೋಪ ಸಮಾರಂಭ ನಡೆಯಿತು. ಭಾಷಣಕಾರರಾಗಿ ಕಾಂ. ಪಿ. ರಾಮಚಂದ್ರರಾವ್, ಬಿ. ವಿ. ಕಕ್ಕಿಲ್ಲಾಯ, ಪ್ರಭಾಕರ ಘಾಟೆ. ಎಂ. ಕೇಶವಯ್ಯ, ಲೋಕಯ್ಯಶೆಟ್ಟಿ, ಬಾಲಕೃಷ್ಣ ರೈ ಮೊದಲಾದವರು ಆಗಮಿಸಿದ್ದರು.

ಕೇಂದ್ರ ಸಂಘದ ಸಂಘಟನಾ ಕಾರ್ಯದರ್ಶಿ ಬಾ. ಸಾಮಗ ಮಲ್ಪೆಯವರು ಸಂಘಟನೆ ಕುರಿತು ಮಾತನಾಡಿದರು.

ಸಂತಾಪ ಸೂಚಕ ಸಭೆ

ತಾ. 12-1-82 ರ ಸಂಜೆ 6 ಗಂಟೆಗೆ ತುಮಕೂರಿನ ಬಸ್‌ಸ್ಟ್ಯಾಂಡ್‌ನಲ್ಲಿರುವ ಕಪಾಲಿ ಹೋಟೆಲ್‌ನ ಸಭಾಂಗಣದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಭಾರತೀಯ ಜನತಾ ಪಕ್ಷ, ಕಾಂಗ್ರೆಸ್ (ಎಸ್), ಜನತಾ ಪಕ್ಷ, ಲೋಕದಳ ಮತ್ತು ವಿವಿಧ ಕಾರ್ಮಿಕ-ನೌಕರರ ಸಂಘಗಳ ಮುಖಂಡರುಗಳು ಸಭೆಸೇರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರಾದ ಕಾಮ್ರೇಡ್ ಜ್ಯೋತಿರ್ಮಯಿ ಬಸುರವರು ನಿಧನರಾದ ಬಗ್ಗೆ ಸಂತಾಪ ಸೂಚಕ ವ್ಯಕ್ತಪಡಿಸಿದರು. ಸಭೆಯಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸುತ್ತಾ ಕಾಂ. ಕೆ. ಆರ್. ನಾಯರ್‌ರವರು ಪಾರ್ಲಿಮೆಂಟಿನಲ್ಲೂ ಮತ್ತು ಹೊರಗಡೆಯೂ ಅವರು ನಡೆಸುತ್ತಿದ್ದ ಧೀರ ಹೋರಾಟಗಳನ್ನು ಆಡಳಿತ ಪಕ್ಷದ ಭ್ರಷ್ಟಾಚಾರಗಳನ್ನೂ ಯಾವ ರೀತಿಯಲ್ಲಿ ಹೊರತರುತ್ತಿದ್ದರು ಎಂಬುದರ ಬಗ್ಗೆಯೂ ವಿವರಿಸಿ ಇಂತಹ ಧೀರ ಹೋರಾಟಗಾರರನ್ನು ಕಳೆದುಕೊಂಡ ದೇಶವು ತುಂಬಾ ಬಡವಾಗಿದೆ ಎಂದರು. ನಂತರ ಒಂದು ನಿಮಿಷ ಎದ್ದು ನಿಂತು ಮೃತರಿಗೆ ಗೌರವ ಸೂಚಿಸಲಾಯಿತು.

ಕಾರ್ಮಿಕ ಮುಖಂಡರು ವಿರೋಧ ಪಕ್ಷದ ಹೋರಾಟಗಾರರು ಆಗಿದ್ದ ಶ್ರೀ ಡಿ. ರಾಜಗೋಪಾಲ್‌ರವರ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಮಾಡಲಾಯಿತು.

ಕರ್ನಾಟಕ ರಾಜ್ಯದಲ್ಲಿ

—ಎನ್ಕೆ

ಮಳೆಯಾಗದಿದ್ದರೆ, ಮಳೆರಾಯನನ್ನು ಒಲಿಸುವ ಸಲುವಾಗಿ ಕತ್ತೆಗಳ ಮೆರವಣಿಗೆ, ಕಪ್ಪೆಗಳ ಮದುವೆ, ಗುಡಿ ಗುಂಡಾರಗಳಲ್ಲಿ ಪೂಜೆಯನ್ನೂ, ವಿಶ್ವಶಾಂತಿಗಾಗಿ ಹೋಮವನ್ನೂ ಮಾಡುವ ರೂಢಿ ನಮ್ಮ ದೇಶದ ಜನ ಅನುಸರಿಸಿಕೊಂಡು ಬಂದಿದ್ದಾರೆ. ಈಗ ಮುಜರಾಯಿ ಇಲಾಖೆಯ ಸಚಿವ ಸುಧೀಂದ್ರರಾವ್ ಕಸಭೆಯವರು ಹೊಸ ಪರಂಪರೆ ಅನುಸರಿಸಲು ಕರೆ ನೀಡಿದ್ದಾರೆ. ಎಲ್ಲ ರೀತಿಯ ಆತಂಕಗಳನ್ನು ಎದುರಿಸಿದ ಗುಂಡೂರಾವ್ ಆಡಳಿತಕ್ಕೆ 2 ವರ್ಷ ಪೂರ್ತಿಗೊಳಿಸಿದ ಇಂದಿನ ಶುಭದಿನದಲ್ಲಿ ರಾಜ್ಯಸರಕಾರವು ಎಲ್ಲ ದೇವಾಲಯಗಳಲ್ಲಿ ವಿಶೇಷ ಪೂಜೆಯ ಏರ್ಪಾಡು ಮಾಡಿದೆಂದು ಹೇಳಿದ್ದಾರೆ. ನಾವೇನು ತಪ್ಪುಮಾಡಿದ್ದೇವೆ. ನಮ್ಮಾಶೀರ್ವಾದ ನಿಮಗೆ ಬೇಡವೇ ಎಂದೊಬ್ಬ ಮುಸಲ್ಮಾನ ಬಾಂಧವರು ಪ್ರಶ್ನೆಹಾಕಿದರಂತೆ. ನೀವು ಪೂಜೆ ಮಾಡುವುದಿಲ್ಲ, ನಿಮಗಾಗಿ ವಿಶೇಷ ಘೋಷಣೆ ಹೊರಡಿಸಿ ಸರಕಾರಿ ಪ್ರಾರ್ಥನೆಯ ವ್ಯವಸ್ಥೆ ಮಾಡಲಾಗುವುದೆಂದು ಸಮಾಧಾನ ಮಾಡಲಾಯಿತಂತೆ.

ಕೊಂಡಿದ್ದಾರೆ. ಅಧಿಕಾರ ಬಿಟ್ಟು ಕೊಡುವ ಪ್ರಮೇಯವಿಲ್ಲ. ಇಂದಿರಾ ರಾಜ್ಯದಲ್ಲಿ ಕಣಕ್ಕೆ ಪರೌಲ್ಯವಿಲ್ಲದೆ ಜನರಿಗೆ ಬೆಲೆ ಇಲ್ಲವಲ್ಲ. ಕಾರಣ ರೈತರು, ಮಕ್ಕಳು ಸತ್ತರೇನಂತೆ.

ಅಲ್ಲಿ ಅಂತುಳೆ ನಿರ್ಗಮನ, ಇಲ್ಲಿ ಗುಂಡೂರಾವ್ ಪೂಜೆ. ಅಲ್ಲಿ ಸಿಮೆಂಟಿನ ಕಳ್ಳಸಂತೆಯಲ್ಲಿ ದೇಣಿಗೆ ವಸೂಲಾದರೆ ಇಲ್ಲಿ ಪೂಜೆ ನಡೆಯುತ್ತಿರುವಾಗಲೇ ವಿದ್ಯುತ್ ಕಡಿತ. ಬಳಕೆದಾರರಿಗೆ, ಕೈಗಾರಿಕೆಗಳಿಗೆ ಆಘಾತ.

ನಮ್ಮ ರಾಜ್ಯದ ವಿದ್ಯುತ್ ಕಡಿತ ಯೋಜನೆಯನ್ವಯ ಪ್ರತಿಯೊಬ್ಬ ಗ್ರಾಹಕನೂ ವಾರದಲ್ಲಿ 6 ಗಂಟೆಗಳ ವಿದ್ಯುತ್ ಕಡಿತದ ಬಿಸಿಯನ್ನನುಭವಿಸಲೇಬೇಕು. ಕಾರ್ಖಾನೆಗಳು ಶೇ. 33ರಷ್ಟು ಕಡಿತವನ್ನನುಸರಿಸಲೇಬೇಕು. ಕೈಗಾರಿಕೆಗಳಿಗಂತೂ ಈ ಕಡಿತ ರೂಢಿಯೇ ಆಗಿಬಿಟ್ಟಿದೆ. ಆದರೆ ಜನಸಾಮಾನ್ಯರಿಗೆ ಮಾತ್ರ ಇದು ಹೊಸ ಪರಿಯಾಗಿದೆ. ಈ ವರ್ಷ ಸಾಕಷ್ಟು ಮಳೆಬಿದ್ದುದರಿಂದ ವಿದ್ಯುತ್ ತೊಂದರೆ ಬರಲಿಕ್ಕಿಲ್ಲೆಂದು ಭಾವಿಸಿರುವಾಗ

ಗಳು ಯಾವ ರಾಜ್ಯದಲ್ಲಾಗಿದೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ನಮ್ಮಲ್ಲಿ ಸಂಕ್ರಮಣ ಮತ್ತಿನ್ನಿತರ ಹಬ್ಬಗಳಿಗೆ ಸಕ್ಕರೆ, ಮತ್ತಿನ್ನಿತರ ಅವಶ್ಯಕ ವಸ್ತುಗಳು ಸಿಗಲಾರದಾಗಿರುವಾಗ, ಕೇರಳ ಸರಕಾರ ಕಳೆದೆರಡು ವರ್ಷಗಳ ಓಣಂ ಹಬ್ಬದ ಸಮಯದಲ್ಲಿ ಜನರಿಗೆ ಹಬ್ಬ ಆಚರಿಸಲು ಅನುಕೂಲವಾಗುವಂತೆ ಕಡಿಮೆ ಬೆಲೆಯಲ್ಲಿ ಅತ್ಯಾವಶ್ಯಕ ವಸ್ತುಗಳನ್ನೆಲ್ಲ ಅಗ್ಗದರದ ಅಂಗಡಿಗಳ ಮೂಲಕ ಸಾರ್ವಜನಿಕರಿಗೆ ಒದಗಿಸಿ ಪ್ರತಿ ವರ್ಷ ರೂ. 67 ಕೋಟಿ ಉಳಿಸಿದ್ದಾರೆ. ಬೆಲೆ ಹೆಚ್ಚಿಸಿ ಲಾಭ ಪಡೆಯುವವರಿಗೆಲ್ಲ ರೂ. 67 ಕೋಟಿ ಉಳಿಸಿದ್ದಾರೆ.. ಬೆಲೆ ಹೆಚ್ಚಿಸಿ ಲಾಭ ಪಡೆಯುವವರಿಗೆಲ್ಲ ರೂ. 67 ಕೋಟಿ ಹಾನಿಯಾಗಿದೆ. ನಮ್ಮ ರಾಜ್ಯದಲ್ಲಿ ನೀವೇನು ಕಂಡಿದ್ದೀರಿ, ಕೊಂಡಿದ್ದೀರಿ. ನಿಮಗೆ ಗೊತ್ತು, ನಾನು ಹೇಳಲಾರೆ.

ಪೇಜಾವರ ಶ್ರೀಗಳ ವ್ಯಥೆ

ಅಧಿಕಾರ ಆರೋಹಣದ ಎರಡು ವರ್ಷ ಮುಗಿಸಿ ಮಂಗಳದ ಮೂರಕ್ಕೆ

ಮಾರ್ಕ್ಸ್‌ವಾದಿ ಸಿದ್ಧಾಂತದಲ್ಲಷ್ಟೇ ಪೇಜಾವರ ಸ್ವಾಮಿಗಳ ಪ್ರಶ್ನೆಗೆ ಉತ್ತರ ಸಿಗಬಹುದಲ್ಲದೆ ಬೇರೆ ತತ್ವಜ್ಞಾನದಲ್ಲಿ ಅಲ್ಲ. ಪುರಾಣ-ಪ್ರವಚನಗಳ ಮೂಲಕ ಮನುಷ್ಯನ ವಿಚಾರ ಸರಣಿಯನ್ನು, ನಡತೆಯನ್ನು, ಜೀವನವನ್ನು ಪರಿವರ್ತಿಸಲು ಸಾಧ್ಯವಿಲ್ಲೆಂಬುದನ್ನು ಹಲವಾರು ಸುಪ್ರಸಿದ್ಧ ಸ್ವಾಮಿಗಳ ಹೇಳಿಕೆಗಳಿಂದಲೇ ಸ್ಪಷ್ಟವಾಗುತ್ತದೆ. ಜನರ ನಿರಾಸೆಗೆ ತಾತ್ಪೂರ್ತಿಕ ಪರಿಹಾರ ಹಾಗೂ ಹೆಚ್ಚಿನ ಭ್ರಮೆಗಳಷ್ಟೇ ಉಂಟಾಗುತ್ತದೆ. ಅಂಥ ಭ್ರಮೆಯಲ್ಲೇ ತೇಲಿಗೊಂಡು, ತಮ್ಮ ಹಿಂದಿನ ಜನ್ಮದ ಕರ್ಮವನ್ನು ನೆನಸಿಕೊಂಡು ಹೊರಟಿದೆ ಜನ ಸಮುದಾಯ. ಇಂಥ ವಿಚಾರ ಸರಣಿ ವಿರುದ್ಧ ಹೋರಾಡಬೇಕಾಗಿದೆ ತಿಳಿದ ಜನ.

ಕಳ್ಳದಾಸ್ತಾನು, ಅನೀತಿ, ಹಿಂಸಾಚಾರ, ಅತ್ಯಾಚಾರಗಳ ಮೂಲವೆಲ್ಲಿ. ಅಂತರಂಗದಲ್ಲಿ ಹುದುಗಿರುವ ಸದ್ಗುಣಗಳನ್ನು ಹೊರತರದಿರುವುದೇ ಇದಕ್ಕೆಲ್ಲ ಕಾರಣವೆಂದು ಸ್ವಾಮಿಗಳೂ ಹಾಗೆಯೇ ಬಂಡವಾಳಶಾಹೀ ಪರ ತತ್ವಜ್ಞಾನಿಗಳೂ, ಅದನ್ನು ಬೆಂಬಲಿ

ಪೇಜಾವರ ಸ್ವಾಮಿಗಳು ಹೇಳುವಂತೆ ಮನುಷ್ಯನ ಹೃದಯದಲ್ಲಿ ಹುದುಗಿರುವ ಸದ್ಗುಣಗಳನ್ನೆಲ್ಲ ಹೊರತೆಗೆಯಬಹುದು. ಯಾವುದೇ ಮಂತ್ರ ಶಕ್ತಿಯಿಂದ, ಪುರಾಣ, ಪ್ರವಚನಗಳಿಂದ ಅದು ಸಾಧ್ಯವಿಲ್ಲವೆಂಬುದನ್ನು ಮಾರ್ಕ್ಸ್‌ವಾದ ಸ್ಪಷ್ಟವಾಗಿ ಅರಿವು ಮಾಡಿಕೊಟ್ಟಿದೆ. ಹಾಗಿರುವಾಗ ಪುರೋಗಾಮಿ ವಿಚಾರವಂತರೆಲ್ಲ, ಪ್ರಗತಿಪಥದಲ್ಲಿ, ಹರಿಜನಗಿರಿಜನರ ಅಸಮಾನತೆಯ ವಿರುದ್ಧ, ಸಾಮಾನ್ಯ ಜನ ಎದುರಿಸುತ್ತಿರುವ ಹಲವಾರು ಸಂಕಷ್ಟಗಳ ವಿರುದ್ಧ ಹೋರಾಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮತ್ತಿನ್ನಿತರ ಎಡ ಮತ್ತು ಪುರೋಗಾಮಿ ಪಕ್ಷ ಮತ್ತು ಶಕ್ತಿಗಳ ಜೊತೆಯಲ್ಲಿ ಸೇರಿ, ರಾಜಕೀಯ, ಸಾಮಾಜಿಕ ಹಾಗೂ ವಿಚಾರ ಕ್ರಾಂತಿಗೆ ಸಹಾಯ ಮಾಡಿದ್ದಾದರೆ, ಅಂಥ ಹೋರಾಟಗಳಲ್ಲಿ ಪಾಲ್ಗೊಂಡದ್ದಾದರೆ, ಇತಿಮಿತಿಯೊಳಗೇನೇ ಅವರು ವ್ಯಕ್ತಮಾಡುತ್ತಿರುವ ಅಭಿಪ್ರಾಯಗಳ ಪರಿಹಾರಕ್ಕೆ ಹೆಚ್ಚಿಗೆ ಅನುಕೂಲವಾಗಬಹುದೆಂದು ನಮ್ಮ ಅಭಿಪ್ರಾಯ. ಇಲ್ಲವಾದರೆ ಕಾವಿಉಡುಪಿನವರ ಉಪದೇಶ ಕಿವಿಯೊಳಗೇನೇ

ಎರಡನೇ ವರ್ಷದಿಂದ ಮೂರನೇ ವರ್ಷಕ್ಕೆ

ರಾವ್ ಆಡಳಿತ ವಹಿಸಿಕೊಂಡ ಮೇಲೆ ರೈತರಿಗೆ ಅನೇಕ ಸವಲತ್ತುಗಳನ್ನು ನೀಡಲಾಗಿದೆಯಂತೆ. ಹೌದು 60ಕ್ಕೂ ಮೇಲ್ಪಟ್ಟು ರೈತರನ್ನು ಕೊಂದು 25 ಸಾವಿರಕ್ಕೂ ಮೇಲ್ಪಟ್ಟು ರೈತರನ್ನು ಜೈಲಿಗಟ್ಟಿದ ಕೀರ್ತಿ ರಾವ್ ಸರಕಾರಕ್ಕಲ್ಲದೆ ಮತ್ತಾರಿಗೆ. ಅಂದು ಪೋಲೀಸ್ ಗೋಲೀಬಾರಿಗೆ ತುತ್ತಾದ ಹೆಣಗಳಿಗೆ ಪೂಜೆ. ಇಂದು ರಾವ್ ಸರಕಾರಕ್ಕೇ ಪೂಜೆ. ಅಂದು ಕಳ್ಳಬಟ್ಟಿ ದುರಂತದಲ್ಲಿ ಅಸುನೀಗಿದ ಹೆಣಗಳ ಮೇಲೆ ಕುಂಕುಮ, ಗಂಧ ಲೇಪನ. ಇಂದು ಗುಡಿಯಲ್ಲಿರುವ ಕಲ್ಲು ದೇವರುಗಳಿಗೆ ಗಂಧ-ಕುಂಕುಮ ಲೇಪನ. ಅಂದು ಸರ್ಕಸ್ ದುರಂತದಲ್ಲಿ ಸುಟ್ಟುಬೂದಿಯಾದ ಮುದ್ದು ಕಂದಗಳಿಗಾಗಿ ರೋಧನ, ಇಂದು ಆ ಭಸ್ಮ ಬಳಿದುಕೊಂಡು ಕೈಮುಗಿದು ನಿಂತ ರಾಯರಿಗೆ ಮೇಹರ್ಪಣ.

ನೀನು ಅಧಿಕಾರ ದುರುಪಯೋಗ ಮಾಡಿದ್ದಿ, ಜನರಿಗೆ ಮೋಸಮಾಡಿದ್ದಿ, ಸಿಮೆಂಟಿನ ಕಳ್ಳವ್ಯಾಪಾರ ಮಾಡಿ ರೂ. 136 ಕೋಟಿ ಸಂಗ್ರಹಿಸಿದ್ದಿ, ಇದು ಕಾಯಿದೆ ದೃಷ್ಟಿಯಲ್ಲಿ ಅನ್ಯಾಯವೆಂದು ಮುಂಬಯಿ ಹೈಕೋರ್ಟ್ ಸಾರಿತು. ಮಹಾರಾಷ್ಟ್ರದ ಮುಖ್ಯಮಂತ್ರಿ ಅಬ್ದುಲ್ ರಹಮಾನ್ ಅಂತುಳೆಯವರು ನಿರ್ಗಮಿಸಿದರು. ಅಂತುಳೆಯವರು ದುಡ್ಡು ಎತ್ತಿಹಾಕಿದ್ದಾರೆ. ಅಧಿಕಾರ ಕಳೆದುಕೊಂಡರು. ಗುಂಡೂರಾಯರು ಗುಂಡು ಹಾಕಿ

ವಿದ್ಯುತ್ ಕಡಿತ ಬಂದಿದೆ. ಅದರ ಬೆನ್ನು ಹತ್ತಿಯೇ ಚಿಮಣಿಎಣ್ಣೆ ಖೋತಾ. ವಿದ್ಯುತ್ತೂ ಇಲ್ಲ. ಚಿಮಣಿ ಎಣ್ಣೆಯೂ ಕಾಣೆ. ರಾಯರ ಆಡಳಿತೆಯ ಎರಡನೇ ವರ್ಷದ ವೈಖರಿ ಇದು.

ಆಕಡೆ ವೈಭವದ ಪೂಜೆ ನಡೆಯುತ್ತಿರುವಾಗಲೇ ಈ ಕಡೆ ಗ್ರಾಹಕರಿಗೆ ಒಂದು ಕಿಲೋ ಸಕ್ಕರೆಯಲ್ಲಿ ಕಡಿತ, ಬತ್ತ ಲೇವಿ ಧೋರಣೆಯಿಂದಾಗಿ ಅಕ್ಕಿ ಬೆಲೆ ರೂ. 4ರಿಂದ ರೂ. 4-50ಕ್ಕೆ. ಸ್ತ್ರೀಪುರುಷರಿಗಳ ರೋಧನ, ಸರಕಾರಿ ನೌಕರರ ನಿರಾಶೆ, ಆಕಾಶವನ್ನಾವರಿಸಿದೆ. ಕಬಿನಿ, ಕೃಷ್ಣಾ ಮೇಲ್ದಂಡೆ ಮತ್ತಿನ್ನಿತರ ಹಲವಾರು ನೀರಾವರಿ ಅಭಿವೃದ್ಧಿ ಯೋಜನೆಗಳು ಕಳೆದೆರಡು ವರ್ಷಗಳಿಂದಲೂ ನಿಷ್ಪ್ರಾಣಾವಸ್ಥೆಯಲ್ಲಿರುವಾಗಲೇ ಪೂಜೆಯ ಗಂಟಾನಾದ. ಏನಂತ ಕೇಳುತೀರಾ, ರಾಜ್ಯದ ಅಭಿವೃದ್ಧಿ ಅಪಾರವಾಗಿ ಮುಂದುವರಿದಿದೆ. ಚಿಂತೆಯಾತಕೆ ಮನುಜ ಎಂದು ಆಲಾಪವನು ಕೇಳುತ್ತಿದ್ದಾರೆ.

ನಮ್ಮ ರಾಜ್ಯದ ಅಭಿವೃದ್ಧಿಯನ್ನು ಪ. ಬಂಗಾಲ, ತ್ರಿಪುರ, ಕೇರಳಗಳಿಗೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿರುವ ಎಡರಂಗದ, ಎಡ ಪ್ರಜಾಪ್ರಭುತ್ವ ರಂಗದ ಸರಕಾರಗಳೊಂದಿಗೆ ಹೋಲಿಸಿದರೆ ನಿಜವಾದ ಅಭಿವೃದ್ಧಿ ಕೆಲಸ

ಗುಂಡೂರಾಯರ ಆಡಳಿತೆ ಮುನ್ನುಗ್ಗುತ್ತಿರುವಾಗ ಉಡುಪಿ ಕೃಷ್ಣ ಮಠದ ಪೇಜಾವರ ಸ್ವಾಮಿಗಳು ಜನರ ಜೊತೆಯಲ್ಲಿ ತಾವೂ ವ್ಯಥೆ ಪಡಲಾರಂಭಿಸಿದ್ದಾರೆ.

ಕಳ್ಳದಾಸ್ತಾನನ್ನು ಬಯಲಿಗೆಳೆಯುವಲ್ಲಿ ರಾಜಕಾರಣಿಗಳು ಅಸಮರ್ಥರಾಗಿರುವಂತೆ ಜನರ ಅಂತರಂಗದಲ್ಲಿ ಹುದುಗಿರುವ ಸದ್ಗುಣಗಳನ್ನು ಹೊರತರುವಲ್ಲಿ ಮಠಾಧಿಪತಿಗಳು ಅಸಮರ್ಥರಾಗಿದ್ದಾರೆಂದು ಪೇಜಾವರ ಸ್ವಾಮಿಯವರು ಬೆಂಗಳೂರಿನಲ್ಲಿ ಚಿಂತೆ ವ್ಯಕ್ತಮಾಡಿದರು.

ಅನೀತಿ, ಹಿಂಸಾಚಾರ, ಅತ್ಯಾಚಾರ, ತಪ್ಪೆಂದೇ ಹೇಳಿಕೊಂಡೇ ನಿಸ್ಸಂಕೋಚವಾಗಿ ಅವುಗಳನ್ನು ಮಾಡುತ್ತಿರುವುದೇ ದೊಡ್ಡ ದುರಂತವಾಗಿದೆಂದು ವೇದನೆ ವ್ಯಕ್ತಮಾಡಿದ್ದಾರೆ.

ಇಂದಿರಾ ಕಾಂಗ್ರೆಸ್ ಪಕ್ಷದ ಆಡಳಿತೆಯಲ್ಲಿ ದನಗಳು ಕೂಡ ತಿನ್ನದ ಜೋಳ, ಗೋದಿ, ಅಕ್ಕಿಯನ್ನು ತಿಂದ ಮಠಾಧಿಪತಿಗಳು ಅಂತರಂಗದಲ್ಲಿ ಹುದುಗಿರುವ ಸದ್ಗುಣಗಳನ್ನು ಹೊರತರುವಲ್ಲಿ ಸಮರ್ಥರಾಗುವುದಾದರೂ ಹೇಗೆಂಬುದನ್ನು ಯಾರೂ ತಿಳಿಸಿಲ್ಲ. ಯಾಕೆ? ಸ್ವಾಮಿಗಳ ಉಪಚಾರ-ಊಟವೇ ಬೇರೆ ಅಲ್ಲವೇ? ಆದರೂ ಈ ಅಸಮರ್ಥತೆ ಯಾಕೆ?

ಸುವ ರಾಜಕಾರಣಿಗಳು ಹೇಳುತ್ತಾರೆ. ಮಾರ್ಕ್ಸ್‌ನ ಸಿದ್ಧಾಂತ ತಿಳಿದವರು ಆ ವಿಚಾರಧಾರೆಯನ್ನು ಅಲ್ಲಗಳೆಯುತ್ತಾರೆ.

ಒಂದು ಸಮಾಜದಲ್ಲಿ ಉತ್ಪಾದನಾ ಸಾಧನೆಗಳ ಮಾಲಕತ್ವ, ಉತ್ಪಾದನಾ ವಿತರಣೆಯ ಜವಾಬ್ದಾರಿ ಯಾರ ವಶದಲ್ಲಿದೆಂಬುದನ್ನು ನೋಡಬೇಕು. ಇವುಗಳ ಮಾಲಕತ್ವ ಬಂಡವಾಳದಾರರ ವಶದಲ್ಲಿರುವ ತನಕ, ಬಂಡವಾಳಶಾಹಿ ಪದ್ಧತಿಯ ಅವಗುಣಗಳೆಲ್ಲ ಸಮಾಜವನ್ನಾವರಿಸಿ ಕೆಟ್ಟಚಟಗಳ ತವರುಮನೆಯಾಗುತ್ತದೆ. ಉತ್ಪಾದನಾ ಸಾಧನೆಗಳ ಮಾಲಕರು ಸಮಾಜವಾದರೆ, ಕಾರ್ಮಿಕ ವರ್ಗವಾದರೆ, ಕಳ್ಳದಾಸ್ತಾನು, ಅತ್ಯಾಚಾರ, ಹಿಂಸಾಚಾರಗಳು ಇಲ್ಲದಂತೆ ಮಾಡಲು ಸಾಧ್ಯ. ಸ್ವಂತ ಆಸ್ತಿಯ ಹಕ್ಕು ಇಂಥ ವಿಚಾರ-ಆಚಾರಗಳಿಗೆ ತವರು ಮನೆ. ಉತ್ಪಾದನಾ ಸಾಧನೆಗಳ ಮೇಲಿನ ಹಕ್ಕನ್ನೇ ಕಸಿದುಕೊಂಡು ಸಮಾಜದ ಸೊತ್ತನ್ನಾಗಿ ಪರಿವರ್ತಿಸಿದರೆ ಹೆಚ್ಚಿನ ಸಮಸ್ಯೆಗಳ ಪರಿಹಾರಕ್ಕೆ ದಾರಿ ತೋರುತ್ತದೆ.

ಸುಲಿಗೆಯಿಲ್ಲದ, ಜೀವನ ಭದ್ರತೆಯ, ಸಮಾಜದಲ್ಲಿ ಶಿಕ್ಷಣ, ಸಮಾಜ ವಿಜ್ಞಾನ, ಆರ್ಥಿಕ ನೀತಿಗಳೆಲ್ಲ ಬಹುಸಂಖ್ಯೆ ಸಮಾಜದ ಹಿತದ ಸಲುವಾಗಿ, ಸುಲಿಗೆಯ ವಿರುದ್ಧ, ಅನುಸರಿಸಿಕೊಂಡು ಹೋದದ್ದಾದರೆ

ಸಿಕ್ಕಿಕೊಂಡು, ನಿತ್ಯಕರ್ಮಗಳಲ್ಲಿ; ವಿಚಾರ-ಆಚಾರಗಳಲ್ಲಿ ಯಾವುದೇ ರೀತಿಯ ಉಪಯೋಗವಾಗದಿರುವಂತೆ, ಪೇಜಾವರ ಸ್ವಾಮಿಗಳ ಕೆಲವು ವಿಚಾರಗಳ, ನುಡಿಗಳ ಪ್ರಯೋಜನವೂ ವಿಫಲವಾಗಿ ಬರೇ ಗಾಳಿಮಾತಾಗಿಯೇ ಉಳಿದು ನಿಷ್ಪ್ರಯೋಜಕವಾಗುವುದರಲ್ಲಿ ಸಂಶಯವಿಲ್ಲ. ವೇದಾಂತದ ಜೊತೆಗೆ ಮಾರ್ಕ್ಸ್‌ವಾದ ತತ್ವಶಾಸ್ತ್ರವನ್ನೂ ಸ್ವಾಮಿಗಳು ಅಭ್ಯಾಸ ಮಾಡಿದರೆ ಸಮಾಜಕ್ಕೆ ಹಿತವಾಗಬಲ್ಲುದು. ●

ವಿದ್ಯಾರ್ಥಿಗಳ ಪ್ರತಿಭಟನೆ

9-1-82ರಂದು ಉತ್ತರ ಪ್ರದೇಶದ ದೇವ್ಲೋಲಿ ಮತ್ತು ಸಾಧುಪುರದಲ್ಲಿ ನಡೆದ ಹರಿಜನರ ಹತ್ಯಾಕಾಂಡವನ್ನು ಪ್ರತಿಭಟಿಸಿ ಬೆಂಗಳೂರಿನ ಸರಕಾರಿ ಕಲಾ ಕಾಲೇಜಿನ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಸಭೆ ನಡೆಸಿದರು. ಹಲ್ಲೆಯಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಭೆಯನ್ನುದ್ದೇಶಿಸಿ ಎಸ್. ಎಫ್. ಐ. ರಾಜ್ಯ ಸಮಿತಿ ಉಪಾಧ್ಯಕ್ಷ ಕಾಂ. ಎನ್. ರಾಜಯ್ಯ ಮಾತನಾಡಿ ದೇವ್ಲೋಲಿ, ಸಾಧುಪುರ ಘಟನೆಗಳ ವಿವರ ನೀಡಿದರು. ಈ ಘಟನೆಗಳನ್ನು ಖಂಡಿಸಿ ವಿದ್ಯಾರ್ಥಿಗಳ ಸಹಿಸಂಗ್ರಹ ಮಾಡಿ ಉ. ಪ್ರ. ಸರಕಾರಕ್ಕೆ ಕಳಿಸಿ ಕೊಡಲು ತೀರ್ಮಾನಿಸಲಾಯಿತು. ●

ಹರಿಜನರ ಮೇಲಿನ ದೌರ್ಜನ್ಯ ಖಂಡಿಸಿ ವಿದ್ಯಾರ್ಥಿಗಳ ಬೃಹತ್ ಮೆರವಣಿಗೆ

1981ರ ನವೆಂಬರ್ ತಿಂಗಳ 18ನೇ ತಾರೀಖು ದೇಶದ ಇತಿಹಾಸದಲ್ಲೊಂದು ಕರಾಳ ದಿನ. ಅಂದು ಉತ್ತರ ಪ್ರದೇಶದ ಮೈನ್‌ಪುರಿ ಜಿಲ್ಲೆಯ ದೇವೋಲಿಯಲ್ಲಿ 28 ಜನ ಹರಿಜನರ ಕಗ್ಗೊಲೆಯಾಯಿತು. ಈ ಘಟನೆ ಮಾನವೀಯತೆಯುಳ್ಳವರ ಮನಸ್ಸಿನಿಂದ ಮಾಸುವಾಗುವ ಮುನ್ನವೆ ಅದೇ ಜಿಲ್ಲೆಯ ಸಾಧುಪುರದಲ್ಲಿ ಡಿಸೆಂಬರ್ 30ರಂದು ಹೆಂಗಸರು ಮತ್ತು ಮಕ್ಕಳೂ ಸೇರಿದಂತೆ 10 ಜನ ಹರಿಜನರ ಕಗ್ಗೊಲೆಯಾಗಿದೆ.

ಸಂವಿಧಾನದಲ್ಲಿನ ಸ್ವಾತಂತ್ರ್ಯ, ಸಮಾನತೆ ಜೀವಿಸುವ ಹಕ್ಕು ಮತ್ತು ದಲಿತರಿಗೆ ರಕ್ಷಣೆ ಇಂತಹ ಪದಗಳ ಅರ್ಥವನ್ನು ಕಳೆದುಕೊಂಡು ಸಂವಿಧಾನದ ಪುಟಗಳನ್ನು ಗೆದ್ದಲು ತಿನ್ನುತ್ತಿದೆ.

ಈ ದೇಶದ ಭೂಮಾಲಿಕ-ಬಂಡವಾಳಶಾಹಿ ವ್ಯವಸ್ಥೆಯಡಿಯಲ್ಲಿ ಶತಮಾನಗಳಿಂದಲೂ ದಲಿತರು ನರಳುತ್ತಲೇ ಬಂದಿದ್ದಾರೆ. ಬಿಹಾರದ ಬೆಲ್ಚಿ, ತ್ರಿಪುರಾ ಮತ್ತು ತಮಿಳುನಾಡಿನ ವಿಲ್ಲಪುರಂಗಳಲ್ಲಿ ಭೂಮಾಲಿಕರು ದಲಿತರ ಎದೆಗೆ ಗುಂಡಿಟ್ಟು ಕೊಂದು ಬೆಂಕಿಗೆಸೆದು ಬೂದಿಮಾಡಿದಾಗ ಆಳುವವರು ಮೊಸಳೆ ಕಣ್ಣೀರು ಸುರಿಸಿದರೇ ಹೊರತು ನರಹತ್ಯೆಗೆ ಕಾರಣರಾದವರಿಗೆ ಶಿಕ್ಷೆಯಾಗಲಿಲ್ಲ.

ಈ ಎಲ್ಲ ಹತ್ಯಾಕಾಂಡಗಳು ಹರಿಜನರ ಮೇಲಷ್ಟೇ ನಡೆದವುಗಳಲ್ಲ. ಸಮಸ್ತ ಮಾನವೀಯತೆಯ ಮೇಲಾದ ಹತ್ಯಾಕಾಂಡ, ಮಾನವೀಯತೆಗೆ ಮಸಿ ಬಳಿದು, ಮನುಷ್ಯತ್ವವಿರುವವರೆಲ್ಲರೂ ತಲೆತಗ್ಗಿಸುವಂತೆ ಮಾಡಿದ ಭಯಂಕರ ಕ್ರೂರಕೃತ್ಯ.

ದಿವೋಲಿ, ಸಾಧುಪುರದಲ್ಲಿ ನಡೆದ ಹರಿಜನರ ಅಮಾನುಷ ಹತ್ಯೆಯನ್ನು ಪ್ರತಿಭಟಿಸಿ ಬೆಂಗಳೂರಿನ ವಿದ್ಯಾರ್ಥಿ ವರ್ಗ ನಾಡಿನ ವಿದ್ಯಾರ್ಥಿ ವೃಂದಕ್ಕೆ ಆದರ್ಶಪ್ರಾಯರಾಗಿದ್ದಾರೆ. 13-1-82ರಂದು ಬೆಳಗ್ಗೆ 11 ಘಂಟೆಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಕಬ್ಬನ್‌ಪಾರ್ಕ್‌ವರೆಗೆ ನಗರದ ವಿಶ್ವವಿದ್ಯಾಲಯ (ಜ್ಞಾನ ಭಾರತಿ) ವಿದ್ಯಾರ್ಥಿಗಳು, ಸರಕಾರಿ ಕಲಾ ವಿದ್ಯಾಲಯ, ವಿಜ್ಞಾನ ಮಹಾ ವಿದ್ಯಾಲಯ, ಇಂಜನೀಯರಿಂಗ್ ಕಾಲೇಜ್ ಮತ್ತು ಮತ್ತಿನ್ನಿತರ ಕಾಲೇಜುಗಳ ವಿದ್ಯಾರ್ಥಿಗಳು ಬೃಹತ್ ಮೆರವಣಿಗೆ ಹೊರಡಿಸಿ ಹರಿಜನರ ಕೊಲೆಯ ಘಟನೆಯನ್ನು ಉಗ್ರವಾಗಿ ಖಂಡಿಸಿದರು.

ಮೆರವಣಿಗೆ ನಂತರ ಕಬ್ಬನ್‌ಪಾರ್ಕಿನಲ್ಲಿ ವಿದ್ಯಾರ್ಥಿಗಳ ಬಹಿರಂಗ ಸಭೆಯನ್ನುದ್ದೇಶಿಸಿ ವಿದ್ಯಾರ್ಥಿ ಮುಖಂಡರಾದ ಎಸ್.ಎಫ್.ಐ.ನ ಎನ್. ರಾಜಣ್ಣ, ಸಿದ್ಧಲಿಂಗಸ್ವಾಮಿ (ಪ್ರ. ಕಾರ್ಯದರ್ಶಿ ಜ್ಞಾನಭಾರತಿ), ಆರ್. ರುದ್ರಪ್ಪ (ಇಂಜನೀಯರಿಂಗ್ ಕಾಲೇಜ್), ದೊಡ್ಡ ಎಲ್ಲಪ್ಪ (ಸರಕಾರಿ ವಿಜ್ಞಾನ ಕಾಲೇಜ್), ಸದಾನಂದ ಸಾಧು (ಸರಕಾರಿ ಕಲಾ ಕಾಲೇಜ್), ಗೋಪಾಲಯ್ಯ (ಸರಕಾರಿ ವಿಜ್ಞಾನ ಕಾಲೇಜ್), ಎಚ್. ಪಿ. ಜನಕರಾಜ (ಜ್ಞಾನ ಭಾರತಿ), ಶಿವಮೂರ್ತಿ (ಜ್ಞಾನ ಭಾರತಿ) ಇವರೆಲ್ಲ ಮಾತನಾಡಿ ಹರಿಜನರ ಕಗ್ಗೊಲೆಯನ್ನು ಖಂಡಿಸಿ ಅಪಾದಿತರನ್ನು ಉಗ್ರವಾಗಿ ಶಿಕ್ಷಿಸಬೇಕೆಂದರು.

ಬಹಿರಂಗ ಸಭೆ ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿತು.

1. ಭೂಮಾಲಿಕರಲ್ಲಿರುವ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು ಅವರ ಲೈಸನ್ಸ್‌ಗಳನ್ನು ರದ್ದುಪಡಿಸಬೇಕು.

2. ಹತ್ಯಾಕಾಂಡಕ್ಕೆ ಕಾರಣರಾದವರನ್ನು ಕೂಡಲೇ ಬಂಧಿಸಿ ನೊಂದ ಕುಟುಂಬಗಳಿಗೆ ಸೂಕ್ತ ಪರಿಹಾರ ಒದಗಿಸಬೇಕು.

3. ಹರಿಜನರಿಗೆ ಸೂಕ್ತ ರೀತಿಯಲ್ಲಿ ಭೂ ವಿತರಣೆ ಮಾಡಬೇಕು.

4. ದಲಿತರಿಗೆ ರಕ್ಷಣೆ ಕೊಡದ ಉ. ಪ್ರ. ಮುಖ್ಯಮಂತ್ರಿ ವಿ. ಪಿ. ಸಿಂಗ್ ಕೂಡಲೇ ರಾಜೀನಾಮೆ ಕೊಡಬೇಕು...ಇತ್ಯಾದಿ.

ನಂತರ ಸಭೆಯು ಕೊಲೆಗೀಡಾದವರಿಗೆ ಸಂತಾಪ ಸೂಚಿಸಿ 2 ನಿಮಿಷ ಮೌನವಾಚರಿಸಿತು.

ಸಾಮಾಜಿಕ ಅನ್ಯಾಯವನ್ನು ಪ್ರತಿಭಟಿಸಲು ಮುಂದಾದ ಬೆಂಗಳೂರಿನ ವಿದ್ಯಾರ್ಥಿ ವೃಂದ ಅಭಿನಂದನೆಗೆ ಅರ್ಹರು.

ಯೂನಿಯನ್ನಿನ ಬೆಳ್ಳಿಹಬ್ಬ

6-1-82ರಂದು ಮೈಸೂರಿನ ಟೌನ್‌ಹಾಲ್‌ನಲ್ಲಿ ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯೀಸ್ ಯೂನಿಯನ್ನಿನ ಬೆಳ್ಳಿಹಬ್ಬವನ್ನಾಚರಿಸಲಾಯಿತು.

ಈ ಸಮಾರಂಭದ ಅಧ್ಯಕ್ಷತೆಯನ್ನು ಸಿ. ಐ. ಟಿ. ಯು. ರಾಜ್ಯ ಸಮಿತಿ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ವಹಿಸಿದ್ದರು. ಆರಂಭದಲ್ಲಿ ಸಂಘದ ಅಧ್ಯಕ್ಷರಾದ ಕಾಂ. ಉಗ್ರಪ್ಪನವರು ಧ್ವಜಾರೋಹಣ ಮಾಡಿ ಹಿಂದಿನ ದಿನಗಳ ಹೋರಾಟಗಳನ್ನು ಜ್ಞಾಪಿಸಿಕೊಂಡರು.

ಸಿ. ಐ. ಟಿ. ಯು. ರಾಜ್ಯಸಮಿತಿ ಉಪಾಧ್ಯಕ್ಷ ಕಾಂ. ವಿ. ಕೆ. ಉಪಾಧ್ಯಾಯರು ಕಾರ್ಯಕ್ರಮ ಉದ್ಘಾಟನೆ ಮಾಡಿದರು. ಅವರು ಮಾತನಾಡುತ್ತ "ಕುಂಬಾವುಟದಡಿಯಲ್ಲಿ ರಾಜ್ಯದಾದ್ಯಂತ ಪೌರಕಾರ್ಮಿಕರು ನಡೆಸಿದ ದಿಟ್ಟಹೋರಾಟಗಳನ್ನು ಮುಂದುವರೆಸಿಕೊಂಡು ಬರಲು ಈ ಬೆಳ್ಳಿಹಬ್ಬವು ನಾಂದಿಯಾಗಲಿ" ಎಂದರು.

ಎ. ಐ. ಟಿ. ಯು. ಸಿ.ಯ ಕಾಂ. ಎಸ್. ಸೋಮಸುಂದರ ಶರ್ಮ, ಎಸ್. ಪಿ. ಶಂಕರನಾರಾಯಣ, ಬಿ. ಎಲ್. ರಘುನಾಥನ್, ಎಸ್. ಎಫ್. ಐ.ನ ಕಾಂ. ಜಯಕುಮಾರ್, ಕಾಂ. ಮಹಮ್ಮದ್ ದಸ್ತಗೀರ್, ಎಸ್. ಲಕ್ಷ್ಮಯ್ಯ ಮೊದಲಾದವರು ಮಾತನಾಡಿ ಸಮಾರಂಭಕ್ಕೆ ಶುಭಕೋರಿದರು.

ನಂತರ ಸ್ಮರಣ ಸಂಚಿಕೆಯನ್ನು ಸಿ. ಐ. ಟಿ. ಯು. ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಬಿಡುಗಡೆ ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಲೋಕಸಭಾ ಸದಸ್ಯರ ಕಾಂ. ಎಂ. ರಾಮಣ್ಣರೈ ಅವರು ಮಾತನಾಡಿ ದೇಶದ ಕಾರ್ಮಿಕವರ್ಗದ ಹೋರಾಟದಲ್ಲಿ ಪೌರಕಾರ್ಮಿಕರೂ ಪಾಲ್ಗೊಂಡು ಆರ್ಥಿಕ, ಸಾಮಾಜಿಕ ಶೋಷಣೆ ತೊಡೆಸುಹಾಕಲು ಶ್ರಮಿಸಬೇಕೆಂದು ಕರೆ ನೀಡಿದರು.

ಸಮಾರಂಭಕ್ಕೆ ತ್ರಿಪುರದ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ, ದುಡಿಯುವ ಮಹಿಳೆಯರ ಸಂಘಟನೆಯ ಕಾರ್ಯದರ್ಶಿ ಕಾಂ. ವಿಮಲಾರಣದಿವೆ, ಲೋಕಸಭಾ ಸದಸ್ಯ ಕಾಂ. ಸಮರಮುಖರ್ಜಿ ಮತ್ತು ಕೇರಳದ ಸಿ. ಐ. ಟಿ. ಯು. ರಾಜ್ಯಸಮಿತಿ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ಕಳಿಸಿದ್ದ ಶುಭಾಶಯ ಸಂದೇಶಗಳನ್ನು ಕಾಂ. ಉಗ್ರಪ್ಪ ಓದಿದರು.

ಕೊನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ಕೆ. ಮೋನ್ ಕೆಲವು ತುರ್ತುಬೇಡಿಕೆಗಳ ಬಗ್ಗೆ ಠರಾವು ಮಂಡಿಸಿದರು. ಸಂಘದ ಖಜಾಂಚಿ ಕಾಂ. ತಿಮ್ಮೇಗೌಡರು ವಂದನೆ ಸಲ್ಲಿಸಿದರು.

ಹಣಕಾಸುಮಂತ್ರಿಗೆ ಮನವಿ

12-1-82ರಂದು ತುಮಕೂರಿಗೆ ಭೇಟಿ ನೀಡಿದ ರಾಜ್ಯ ಹಣಕಾಸು ಮಂತ್ರಿಯವರಿಗೆ ಕರ್ನಾಟಕ ರಾಜ್ಯ ಸರಕಾರಿ ನೌಕರರ ತುಮಕೂರು ಜಿಲ್ಲಾ ಘಟಕದ ಪರವಾಗಿ ಮನವಿ ಸಲ್ಲಿಸಲಾಯಿತು. ಮನವಿಯ ಸಂಕ್ಷಿಪ್ತ ಪಾಠವಿಂತಿದೆ:

"ವೇತನ ಪರಿಷ್ಕರಣ, ಕಾಲಮಿತಿ ಪದೋನ್ನತಿ ಮತ್ತು ನಿವೃತ್ತಿ ವಯಸ್ಸಿನ ಏರಿಕೆಯೇ ಮುಂತಾದ ನಮ್ಮ ನ್ಯಾಯಯುತ ಬೇಡಿಕೆಗಳ ಬಗ್ಗೆ ಸರಕಾರ ತೆಗೆದುಕೊಂಡಿರುವ ತೀರ್ಮಾನದಿಂದ ನಮಗಾಗಿರುವ ಅನ್ಯಾಯ ಸರಿಪಡಿಸಲು ಈ ಮನವಿಯನ್ನು ಸಲ್ಲಿಸುತ್ತಿದ್ದೇವೆ".

"ಗಗನಕ್ಕೇರಿರುವ ಬೆಲೆಗಳಿಂದಾಗಿ ನೌಕರರು ಕಂಗೆಟ್ಟಿದ್ದಾರೆ. 300ರೂಗಳಿಗೂ ಕಡಿಮೆ ಸಂಬಳ ಪಡೆಯುವವರು ಶೇ. 65ರಷ್ಟು ಇದ್ದಾರೆ. ತಾವೇ ಅಧ್ಯಕ್ಷರಾಗಿರುವ ಮಂತ್ರಿಮಂಡಲದ ವೇತನ ಪರಿಷ್ಕರಣ ಉಪಸಮಿತಿಯ ವರದಿ ಹೊರಬರಲೇ ಇಲ್ಲ. ಕೊನೆಗೆ ನಮ್ಮ ಕೇಂದ್ರ ಸಂಘದ ಆದೇಶಕ್ಕನುಗುಣವಾಗಿ ಒಂದು ದಿನದ ಸಾಂಕೇತಿಕ ಮುಷ್ಕರ (6-1-1982) ವನ್ನೂ ಆಚರಿಸಬೇಕಾದ ಪರಿಸ್ಥಿತಿ ಬಂದಿತು".

"ಸರಕಾರದ ಕಾಲಮೀರಿದ ಎಂಟು ಅಂಶಗಳ ಸೂತ್ರವನ್ನೂ ಸಹ ಈಗಾಗಲೇ ನಮ್ಮ ಕೇಂದ್ರ ಸಂಘವು ತನ್ನ ಕಾರ್ಯಕಾರಿ ಸಮಿತಿಯಲ್ಲಿ ಪರಿಶೀಲಿಸಿ ಕೆಲವು ಮಾರ್ಪಾಡುಗಳನ್ನು ಸೂಚಿಸಿ ಮಂಜೂರಾತಿಗೆ ಸರಕಾರಕ್ಕೆ ಕಳುಹಿಸಿದೆ. ಇವುಗಳ ಮರುಪರಿಶೀಲನೆ ಮತ್ತು ಮಂಜೂರಾತಿಗಾಗಿ ಒಂದು ತಿಂಗಳ ಕಾಲಾವಕಾಶ ಕೊಟ್ಟಿದೆ".

"ನಮ್ಮ ಬೇಡಿಕೆಗಳನ್ನು ಕೂಡಲೇ ಈಡೇರಿಸಿ ಎಂದಿನಂತೆ ಸರಕಾರಿ ಹಾಗೂ ಸಾರ್ವಜನಿಕ ಸೇವೆಯಲ್ಲಿ ನಿರತರಾಗಲು ಅನುವು ಮಾಡಿಕೊಡುತ್ತಿರೆಂದು ಜಿಲ್ಲೆಯ 24 ಸಾವಿರ ಸರಕಾರಿ ನೌಕರರ ಪರವಾಗಿ ಕೋರುತ್ತೇವೆ".

(6-1-82ರಂದು ರಾಜ್ಯದಾದ್ಯಂತ ಸರಕಾರಿ ನೌಕರರು ಒಂದು ದಿನದ ಸಾಂಕೇತಿಕ ಮುಷ್ಕರ ಹೂಡಿದ್ದರು. ಬೇಡಿಕೆಗಳನ್ನು ಕೂಡಲೇ ಈಡೇರಿಸದಿದ್ದಲ್ಲಿ 11-3-82 ರಿಂದ ಅನಿರ್ಧಿಷ್ಟಾವಧಿ ಮುಷ್ಕರದ ತೀರ್ಮಾನವನ್ನು ರಾಜ್ಯ ಸರಕಾರಿ ನೌಕರರು ಕೈಕೊಂಡಿದ್ದಾರೆ.)

ಡಿ.ವೈ.ಎಫ್.ಐ. ತಾಲ್ಲೂಕು ಸಮಿತಿ

12-1-82ರಂದು ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸಮೇತನಹಳ್ಳಿಯಲ್ಲಿ ಡಿ.ವೈ.ಎಫ್.ಐ. ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು.

ಈ ಕುರಿತು ನಡೆದ ಸಭೆಯನ್ನುದ್ದೇಶಿಸಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಎಸ್. ಶಿವರಾಂ ಮಾತನಾಡಿ ಡಿ.ವೈ.ಎಫ್.ಐ.ಯನ್ನು ಬಲಿಷ್ಠಗೊಳಿಸಲು ಕರೆ ನೀಡಿದರು.

ನಂತರ ಡಿ.ವೈ.ಎಫ್.ಐ. ಪ್ರಧಾನ ಕಾರ್ಯದರ್ಶಿ ಕಾಂ. ಶ್ರೀರಾಮರೆಡ್ಡಿಯವರು ಮಾತನಾಡಿ ಡಿ.ವೈ.ಎಫ್.ಐ. ಕಾರ್ಯಕ್ರಮದ ವಿವರಣೆ ನೀಡಿದರು. ಸಭೆಯಲ್ಲಿ ಜಿಲ್ಲಾ ಸಹ ಕಾರ್ಯದರ್ಶಿ ಕಾಂ. ರಂಗಸ್ವಾಮಿಯವರೂ ಪಾಲ್ಗೊಂಡಿದ್ದರು.

ಕೊನೆಯಲ್ಲಿ ತಾಲ್ಲೂಕು ಮಟ್ಟದ ಸಮಿತಿಯನ್ನು ರಚಿಸಲಾಯಿತು. ಕಾರ್ಯದರ್ಶಿಯಾಗಿ ಡಿ. ನಾರಾಯಣಸ್ವಾಮಿ, ಅಧ್ಯಕ್ಷರಾಗಿ ಶಿವಪುತ್ರಪ್ಪಶೆಟ್ಟಿ, ಖಜಾಂಚಿಯಾಗಿ ಎ. ಆರ್. ಸಿದ್ದಣ್ಣ, ಉಪಾಧ್ಯಕ್ಷರಾಗಿ ವಿ. ಸಿದ್ದೇಶಪ್ಪ, ಸಹಕಾರ್ಯದರ್ಶಿಗಳಾಗಿ ನಾರಾಯಣಪ್ಪ ಹಾಗೂ ಪುಟ್ಟರಾಜು ಇವರು ಆಯ್ಕೆ ಮಾಡಿತು. ಹಾಗೂ ತಾಲ್ಲೂಕು ಸಮಿತಿಗೆ ಒಟ್ಟು ಹದಿಮೂರು ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಪಕ್ಷದ ಅಖಿಲಭಾರತ ಸಮ್ಮೇಳನಕ್ಕೆ ಭರದಿಂದ ಸಿದ್ಧತೆ

ಜನವರಿ 26ರಿಂದ 31ರವರೆಗೆ ಆಂಧ್ರಪ್ರದೇಶದ ವಿಜಯವಾಡಾದಲ್ಲಿ ನಡೆಯಲಿರುವ ಮಾರ್ಕ್ಸ್‌ವಾದಿ ಅಖಿಲ ಭಾರತ ಸಮ್ಮೇಳನಕ್ಕೆ ವಿಜಯವಾಡಾದಲ್ಲಿ ಭರದಿಂದ ಸಿದ್ಧತೆಗಳು ನಡೆಯುತ್ತಿವೆ.

ಈ ಕುರಿತು ರಚಿತವಾದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಕಾಂ. ಪಿ. ಸುಂದರಯ್ಯ, ಪ್ರಧಾನಕಾರ್ಯದರ್ಶಿಯಾಗಿ ಕಾಂ. ಮೋಟೂರು ಹನುಮಂತರಾವ್ ಕಾರ್ಯನಿರ್ವಹಿಸುತ್ತಿದ್ದಾರೆ. ಪಕ್ಷದ ಕಾರ್ಯಕರ್ತರು ಸಮ್ಮೇಳನದ ಯಶಸ್ಸಿಗೆ ಹಗಲಿರುಳೂ ದುಡಿಯುತ್ತಿದ್ದಾರೆ. ನಿರೀಕ್ಷೆಗೂ ಮೀರಿ ಹಣ, ದವಸ-ಧಾನ್ಯ ಸಂಗ್ರಹವಾಗುತ್ತಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಘಟಕದ ಪರವಾಗಿ ಕಾಂ. ಎಂ. ಕೆ. ಭಟ್, ಎನ್. ಎಲ್. ಉಪಾಧ್ಯಾಯ, ಸೂರ್ಯನಾರಾಯಣರಾವ್ ಮತ್ತು ಕಾಂ. ಪಿ. ರಾಮಚಂದ್ರರಾವ್ ಪ್ರತಿನಿಧಿಗಳಾಗಿ ವಿಜಯವಾಡಾ ಸಮ್ಮೇಳನಕ್ಕೆ ತೆರಳಲಿದ್ದಾರೆ.

ಕಾಂ. ಸಿ. ನಂಜುಂಡಪ್ಪ, ವಿಜೆಕೆ ನಾಯರ್ ಮತ್ತು ಕಾಂ. ಕೆ. ಆರ್. ಶ್ರೀಮಾನ್ ಈ ಮೂವರು ತೆರಳಿದ್ದಾರೆ.

ಸಮ್ಮೇಳನದ ಅಂಗವಾಗಿ ಜನವರಿ 31ರಂದು ಭಾರೀ ಬಹಿರಂಗ ಸಭೆ ಮತ್ತು ಬೃಹತ್ ರ್‍ಯಾಲಿಯನ್ನು ವ್ಯವಸ್ಥೆಗೊಳಿಸಲಾಗಿದೆ.

ದೇಶದ ಸ್ವಾತಂತ್ರ್ಯ ಗಂಡಾಂತರದಲ್ಲಿದೆ

ಎಚ್ಚರಿಕೆ! : ಎಂ. ಕೆ.

35 ವರ್ಷಗಳ ಹಿಂದೆ ಜನರು ಅಪಾರ ತ್ಯಾಗಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಕ್ಕುಗಳು ಗಂಡಾಂತರದಲ್ಲಿವೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಜನರನ್ನು ಎಚ್ಚರಿಸಿದರು.

ದಿನಾಂಕ 11-1-82ರಂದು ಬಿಜಾಪುರದಲ್ಲಿ ವಿರೋಧಿ ಪಕ್ಷಗಳ ಪರವಾಗಿ ಭಾರೀ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಎಂ. ಕೆ. ಮಾತನಾಡುತ್ತಿದ್ದರು.

"ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆ (ಐ. ಎಂ. ಎಫ್.)ಯಿಂದ 5000 ಕೋಟಿ ರೂ. ಸಾಲಪಡೆದು, ಅವರ ಕರಾರುಗಳಿಗೆ ಒಪ್ಪಿಕೊಂಡು ದೇಶದ ಸ್ವಾತಂತ್ರ್ಯವನ್ನೇ ಶ್ರೀಮತಿ ಗಾಂಧೀ ಒತ್ತೆ ಇಟ್ಟಿದ್ದಾರೆ. ಉತ್ಪಾದನೇತರ ಖರ್ಚನ್ನು ಕಡಿಮೆ ಮಾಡಬೇಕು, ಆಹಾರಧಾನ್ಯ ಉತ್ಪಾದನೆಗೆ ಧನ ಸಹಾಯ ನಿಲ್ಲಿಸಬೇಕು, ಕಾರ್ಮಿಕರ ಮುಷ್ಕರಗಳಿಗೆ ಪ್ರತಿಬಂಧ ಹಾಕಬೇಕು, ರೇಲ್ವೆ ಸರಕು ಸಾಗಾಣಿಕೆ ದರ, ಜನರ ಮೇಲೆ ತೆರಿಗೆಗಳು ಹೆಚ್ಚಾಗಬೇಕು ಈ ಮುಂತಾದ ಹಲವಾರು ಕರಾರುಗಳನ್ನು ಹಾಕಿ ಈ ಸಾಲ ಕೊಡಲಾಗಿದೆ. ಇದರಿಂದಾಗಿ ನೌಕರರ ವೇತನ ಸ್ತಂಭನ, ಸಾರ್ವಜನಿಕರ ಮೇಲೆ ಕರಭಾರ, ಹೋರಾಟಗಳ ಮೇಲೆ ಪ್ರತಿಬಂಧ ಹೇರಲಾಗುತ್ತಿದೆ" ಎಂದು ಕಾಂ. ಎಂ. ಕೆ. ತಿಳಿಸಿದರು.

ಅವರು ಮುಂದುವರೆದು ಐ.ಎಂ.ಎಫ್. ಸಾಲ ಪಡೆದಿರುವುದರ ವಿರುದ್ಧ ಹೋರಾಟ ನಡೆಸುವುದು ಅಗತ್ಯ ಎಂದರು.

ಸಭೆಯ ಅಧ್ಯಕ್ಷತೆಯನ್ನು ಕಾಂಗ್ರೆಸ್(ಎಸ್) ಮುಖಂಡ ವೈ. ಬಿ. ಪಾಟುಣವರ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ. ಎನ್. ಕೆ. ಉಪಾಧ್ಯಾಯ, ರೈತಸಂಘದ ಕಾಂ. ಭೀಮಸಿ ಕಲಾದಗಿ, ಕಾಂಗ್ರೆಸ್(ಎಸ್)ನ ತುಕಾರಾಂ ಚಂಚಲಕರ, ಸಿ. ಪಿ. ಐ.ನ ಎಲ್. ಬಿ. ಲಾಳುಂದಗುಂದಿ, ಎಸ್. ಎಫ್. ಐ.ನ ಪಿ. ವಿ. ನರೇಗಲ್ ಮೊದಲಾದವರು ಮಾತನಾಡಿದರು.

ಎ. ಕೆ. ಜಿ. ಪುಸ್ತಕ ಮಾರಾಟದ ಬಗ್ಗೆ

ದಿವಂಗತ ಕಾಮ್ರೇಡ್ ಎ. ಕೆ. ಗೋಪಾಲನ್ ಅವರ ಆತ್ಮ ಚರಿತ್ರೆಯು ಪುಸ್ತಕವು ಫೆಬ್ರವರಿ ಮಧ್ಯಕ್ಕಾಗುವಾಗ ಪ್ರಕಟಗೊಳ್ಳಲಿದೆ. ಪ್ರಕಟಣಾಪೂರ್ವ ಮಾರಾಟವನ್ನು 1982ನೇ ಇಸವಿ ಜನವರಿ 31ರೊಳಗೆ ಪೂರ್ಣಗೊಳಿಸಿ ರಸೀದಿ ಪುಸ್ತಕ ಮತ್ತು ಹಣವನ್ನು ಸಿ. ಪಿ. ಐ.(ಎಂ) ರಾಜ್ಯಸಮಿತಿ ಕಾರ್ಯದರ್ಶಿಯವರಿಗೆ ಫೆಬ್ರವರಿ 5ರೊಳಗಾಗಿ ಕಳುಹಿಸಿಕೊಡಬೇಕು. ಜನವರಿ 31 ಆದ ಮೇಲೆ ರಿಯಾಯಿತಿ ದರದಲ್ಲಿರುವ ಪ್ರಕಟಣಾಪೂರ್ವ ಬೆಲೆ ರೂ. 15/-ಕ್ಕೆ ಪುಸ್ತಕವು ದೊರೆಯುವುದಿಲ್ಲ. ಪ್ರಕಟಣೆಯಾದ ಮೇಲೆ ರೂ. 25/- ಕೊಟ್ಟು ಪುಸ್ತಕವನ್ನು ಪಡೆದುಕೊಳ್ಳಬಹುದು. ಜನವರಿ 31ಕ್ಕೆ ಮೊದಲೇ ಮಾರಾಟ ಮಾಡಿದ್ದರೂ, ಫೆಬ್ರವರಿ 5ರೊಳಗೆ ನಮಗೆ ವಿವರ ಮತ್ತು ಹಣ ದೊರೆಯದಿದ್ದಲ್ಲಿ, ಪ್ರಕಟಣಾಪೂರ್ವ ಬೆಲೆಗೆ ಪುಸ್ತಕ ಕಳುಹಿಸಿ ಕೊಡಲು ಸಾಧ್ಯವಾಗದಿದ್ದಲ್ಲಿ ನಾವು ಜವಾಬ್ದಾರರಲ್ಲ.

ಎಂ. ಕೆ. ಭಟ್
ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ
ಕಾರ್ಯದರ್ಶಿ

ಭಾಷಣ ಸ್ಪರ್ಧೆ

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಗುಲಬರ್ಗಾ ಘಟಕದ ಆಶ್ರಯದಲ್ಲಿ 3-1-82ರಂದು ಮಹಿಳೆಯರಿಗಾಗಿ ಮುಕ್ತ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಭಾಷಣ ಸ್ಪರ್ಧೆಗೆ 'ಮಹಿಳೆ ಮತ್ತು ಉದ್ಯೋಗ' ಮತ್ತು 'ಮಹಿಳೆ ಮತ್ತು ಮೂಢ ನಂಬಿಕೆಗಳು', ಎಂಬ ವಿಷಯವನ್ನಿಡಲಾಗಿತ್ತು.

ಸ್ಥಳೀಯ ಮಹಿಳಾ ಕಾಲೇಜಿನ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿನಿಯಾದ ಕು. ಸರಸ್ವತಿ ಪ್ರಥಮ ಬಹುಮಾನವನ್ನು, ಸರಕಾರಿ ಬಾಲಕಿಯರ ಪ್ರೌಢಶಾಲೆಯ ಹತ್ತನೇ ತರಗತಿಯ ವಿದ್ಯಾರ್ಥಿನಿ ಕು. ರುಕ್ಸಾನಾರವರು ದ್ವಿತೀಯ ಬಹುಮಾನವನ್ನು, ಮೂರನೇಯ ಬಹುಮಾನವನ್ನು ಶರಣಬಸವೇಶ್ವರ ಆರ್ಟ್ಸ್ ಕಾಲೇಜಿನ ಪ್ರಥಮ ಬಿ. ಎ. ವಿದ್ಯಾರ್ಥಿನಿಯಾದ ಕು. ಲಲಿತಾ ಮುಹಾಂತಪೂರ ಪಡೆದುಕೊಂಡರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾದ ಶ್ರೀಮತಿ ಸೌದಾಮಿನಿ ರಾವ್ ಆಗಮಿಸಿದ್ದರು. ಕಾರ್ಯಕ್ರಮ ನಿರ್ವಹಣೆಯನ್ನು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಸ್ಥಳೀಯ ಘಟಕದ ಸಂಚಾಲಕಿ ಕೆ. ಶರೀಫಾ ಅವರು ನಿರ್ವಹಿಸಿದರು.

ಸಂಘದ ಮುಖಂಡರ ವಜಾ

8-1-82ರಂದು ಶಿವಮೊಗ್ಗೆಯಲ್ಲಿ ಥರ್ಮಿಟ್ ಅಲಾಯ್ಸ್ ಎಂಪ್ಲಾಯೀಸ್ ಯೂನಿಯನ್ನಿನ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಬಿ. ತಿರುಕಪ್ಪನವರು ವಹಿಸಿದ್ದರು.

ಸಭೆಯಲ್ಲಿ ಥರ್ಮಿಟ್ ಅಲಾಯ್ಸ್ ಆಡಳಿತವರ್ಗ ಸಂಘದ ಮುಖಂಡರನ್ನು ವಜಾ ಮಾಡಿರುವುದನ್ನು ಉಗ್ರವಾಗಿ ಖಂಡಿಸಲಾಯಿತು.

ಸಂಘ ರಚಿಸಿಕೊಂಡಿರುವುದನ್ನು ಸಹಿಸದೆ ಆಡಳಿತವರ್ಗ ವಿನಾಕಾರಣವಾಗಿ ಸಂಘದ ಮುಖಂಡರನ್ನು ವಜಾಮಾಡಿದೆ. ಕಾರ್ಮಿಕರು ಸಂಘ ರಚಿಸಿಕೊಳ್ಳುವುದು ಅವರ ಮೂಲಭೂತ ಹಕ್ಕು. ಈ ಹಕ್ಕಿಗೆ ಧಕ್ಕೆ ತರಲು ಹೊರಟಿರುವ ಥರ್ಮಿಟ್ ಅಲಾಯ್ಸ್‌ನ ಆಡಳಿತವರ್ಗದ ನೀತಿಯನ್ನು ಪ್ರತಿಭಟಿಸಲು ಎಲ್ಲಾ ಕಾರ್ಮಿಕ ಸಂಘಗಳು ಹಾಗೂ ಸಂಘ ಸಂಸ್ಥೆಗಳು ಬೆಂಬಲ ನೀಡಬೇಕೆಂದು ಥರ್ಮಿಟ್ ಅಲಾಯ್ಸ್ ಎಂಪ್ಲಾಯೀಸ್ ಯೂನಿಯನ್ ಮನವಿ ಮಾಡಿದೆ.

ತಿದ್ದುಪಡಿ

ಕಳೆದ ಸಂಚಿಕೆಯ 6ನೇ ಪುಟದ ಮೂರನೆ ಕಾಲಂ(Sub-heading)ನಲ್ಲಿ 'ಬಾಂಬ್ ಬೇಡ ಉದ್ಯೋಗ ಬೇಡ' ಎಂದು ಇದೆ. ಇದನ್ನು 'ಬಾಂಬ್ ಬೇಡ ಉದ್ಯೋಗ ಬೇಕು' ಎಂದು ಓದಿಕೊಳ್ಳಬೇಕಾಗಿ ವಿನಂತಿ.

ಸ್ಥಳಾವಕಾಶಕ್ಕೆ ಮನವಿ

ಸಿಟಿ ಬಸ್‌ಗಳಲ್ಲಿ ವಿಪರೀತ ಗದ್ದಲದಿಂದಾಗಿ ಮಹಿಳೆಯರೂ, ವಯಸ್ಸಾದವರೂ ಪರದಾಡುವ ಸ್ಥಿತಿ ಎಲ್ಲೆಡೆ ಇದೆ.

ಗುಲಬರ್ಗಾದಲ್ಲಿ 14-12-81ರಂದು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕಾರ್ಯಕರ್ತೆಯರು ಡಿವಿಜನಲ್ ಕಂಟ್ರೋಲರ್‌ರನ್ನು ಭೇಟಿ ಮಾಡಿ ಸಿಟಿಬಸ್‌ಗಳಲ್ಲಿ ಮಹಿಳೆಯರಿಗೆ ಸ್ಥಳಗಳನ್ನು ಕಾಯ್ದಿಡುವಂತೆ ಒತ್ತಾಯಿಸಿದರು.

ಈ ನಿಯೋಗದ ನೇತೃತ್ವವನ್ನು ಕೆ. ಶರೀಫಾ, ಹೇಮಲತಾ, ಮೆಹಮೂದಾ ಜಲಾಲ, ಅನಿತಾ, ಸುಶೀಲಾ ಮತ್ತು ಗಂಗಾ ಇವರುಗಳು ವಹಿಸಿದ್ದರು.

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕಾರ್ಯಕರ್ತೆಯರ ಒತ್ತಾಯಕ್ಕೆ ಮಣಿದು ಸಿಟಿಬಸ್‌ಗಳಲ್ಲಿ ಸಧ್ಯ 6 ಸೀಟುಗಳನ್ನು ಮಹಿಳೆಯರಿಗೇ ಕಾಯ್ದಿಡಲಾಗುವದೆಂದು ಭರವಸೆ ನೀಡಿದ್ದಾರೆ.

ಡಿವಿಜನಲ್ ಕಂಟ್ರೋಲರ್‌ರ ಈ ಭರವಸೆ ಈಗಾಗಲೇ ಕಾರ್ಯಗತವಾಗಿದೆಯೆಂದೂ ತಿಳಿದು ಬಂದಿದೆ.

ಯುವಜನ ಫೆಡರೇಶನ್ ಕಚೇರಿ ಉದ್ಘಾಟನೆ

10-1-82ರಂದು ದ.ಕ. ಜಿಲ್ಲಾ ಕುಂದಾಪುರ ತಾಲ್ಲೂಕಿನ ಕೋಣಿ ಗ್ರಾಮದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಕಚೇರಿಯನ್ನು ಕರ್ನಾಟಕ ರಾಜ್ಯ ಯುವಜನ ಫೆಡರೇಷನ್‌ನ ಉಪಾಧ್ಯಕ್ಷ ಕಾಂ. ಮಹಾಬಲ ವಡೇರ ಹೋಬಳಿಯವರು ಉದ್ಘಾಟಿಸಿದರು. ರೈತ, ಕಾರ್ಮಿಕ ಮುಂದಾಳು ಕಾಂ. ಅಬ್ರಹಾಂ ಕರ್ಕಡರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕಾಂ. ಮಹಾಬಲವಡೇರ ಹೋಬಳಿಯವರು ತಮ್ಮ ಉದ್ಘಾಟನಾ ಭಾಷಣ ಮಾಡುತ್ತ ಯುವಜನರ ಸಂಘಟನೆಯ ಮಹತ್ವ ಮತ್ತು ಧ್ಯೇಯೋದ್ದೇಶಗಳ ಬಗ್ಗೆ ವಿವರಣೆ ನೀಡಿದರು. ಕಾಂ. ಅನಂದಭಂಡಾರಿ ಮತ್ತು ಕಾಂ. ಸಾಂತಾವರಶೀನರವರು ಸಭಿಕರನ್ನುದ್ದೇಶಿಸಿ ಮಾತನಾಡಿದರು.

ಕಾಂ. ಅಬ್ರಹಾಂಕರ್ಕಡರವರು ಅಧ್ಯಕ್ಷೀಯ ಭಾಷಣದಲ್ಲಿ ದುರ್ಬಲವರ್ಗದ ಮತ್ತು ಅತ್ಯಂತ ತುಳಿತಕ್ಕೊಳಗಾದ ಯುವಜನರನ್ನು ಮುಖ್ಯವಾಗಿ ಸಂಘಟಿಸಿ ಹೋರಾಟಕ್ಕಿಳಿಸಬೇಕೆಂದರು. ಪ್ರಾರಂಭದಲ್ಲಿ ಡಿ.ವೈ.ಎಫ್.ಐ. ಕಾರ್ಯದರ್ಶಿ ಕಾಮ್ರೇಡ್ ವೆಂಕಟೇಶ ಕೋಣಿ ಸ್ವಾಗತಿಸಿದರು. ಕೆ. ನಾರಾಯಣ ಆಚಾರ್‌ರವರು ಧನ್ಯವಾದವನ್ನಿತ್ತರು.

ಕರ್ನಾಟಕ ಪ್ರಾಂತ ರೈತಸಂಘದ ಉದ್ಘಾಟನೆ

ಮುದಗಲ್ಲಿನಲ್ಲಿ ತಾ॥ 8-1-82ರಂದು ರೈತರ ಪ್ರತಿನಿಧಿಗಳ ಸಭೆ ಸೇರಿ ಪ್ರಾಂತ ರೈತ ಸಂಘದ ಘಟಕವನ್ನು ಉದ್ಘಾಟಿಸಲಾಯಿತು. ಶ್ರೀ ರಘುನಾಥಸಿಂಗ್ ಹಜಾರಿಯವರನ್ನು ಹತ್ತು ಜನರ ತಾತ್ಕಾಲಿಕ ಕಾರ್ಯಕಾರಿ ಸಮಿತಿಗೆ ಸಂಚಾಲಕರನ್ನಾಗಿ ನೇಮಿಸಲಾಯಿತು. ಜಿಲ್ಲಾ ಸಂಚಾಲಕರಾದ ಕಾಂ. ಚಂದ್ರಶೇಕರ ಬಾಳೆಯವರು ರೈತರ ಸಮಸ್ಯೆ ಮತ್ತು ಸಂಘಟನೆಯ ಅವಶ್ಯಕತೆಯನ್ನು ಕುರಿತು ಸಭೆಗೆ ವಿವರಿಸಿದರು. ಸರಕಾರದ ರೈತ ವಿರೋಧಿ ನೀತಿಯನ್ನು ಸಭೆಯಲ್ಲಿ ಖಂಡಿಸಲಾಯಿತು. ಮಾರ್ಚಿನಲ್ಲಿ ನಡೆಯುವ ರಾಜ್ಯಮಟ್ಟದ ಸಮ್ಮೇಳನದ ಅಂಗವಾಗಿ ಸದಸ್ಯತ್ವ ಚಳುವಳಿಯನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಯಿತು.

ನಿಧನ

ಬಂಟ್ವಾಳ ತಾಲೂಕಿನ ಇರಾಗ್ರಾಮದ ಮಂಜಪ್ಪ ಮೂಲ್ಯರ ಮಗನಾದ ತೋಮ ಮೂಲ್ಯರು 1-1-82ರಂದು ಅಸ್ವಸ್ಥತೆಯಿಂದ ನಿಧನರಾಗಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿತೈಷಿಯಾಗಿದ್ದ ತೋಮ ಮೂಲ್ಯರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಂಟ್ವಾಳ ತಾಲ್ಲೂಕು ಸಮಿತಿಯು ಸಂತಾಪ ವ್ಯಕ್ತಪಡಿಸಿದೆ.

ಜಿಲ್ಲಾ ರೈತಸಂಘದ ಸಭೆ

3-1-82ರಂದು ತುಮಕೂರಿನಲ್ಲಿ ಜಿಲ್ಲಾ ರೈತಸಂಘದ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ. ಎನ್. ಬಿ. ಲಿಂಗದೇವರು ವಹಿಸಿದ್ದರು.

ಆರಂಭದಲ್ಲಿ ಕಾಂ. ಎಚ್. ಸಿ. ಚನ್ನಪ್ಪ ವರದಿ ಮಂಡಿಸಿದರು. 1982 ಫೆಬ್ರವರಿ ಕೊನೆಯ ವಾರದಲ್ಲಿ ಜಿಲ್ಲಾ ರೈತಸಮ್ಮೇಳನವನ್ನು ತುಮಕೂರಿನಲ್ಲಿ ನಡೆಸಲು ತೀರ್ಮಾನಿಸಲಾಯಿತು. ಈ ಮುನ್ನ ತಾಲ್ಲೂಕು ಸಮ್ಮೇಳನ ನಡೆಸುವಂತೆಯೂ, ರೈತ-ಸಂಘದ ಸದಸ್ಯತ್ವ ನೋಂದಾಯಿಸುವುದನ್ನು ಚುರುಕುಗೊಳಿಸುವಂತೆ ತೀರ್ಮಾನಿಸಲಾಯಿತು.

ಜ. 19ರ ಮಹಾ ಮುಷ್ಕರ

(1ನೇ ಪುಟದಿಂದ)

ಕಳೆದ ಒಂದು ವರ್ಷದಲ್ಲಿ ದೇಶಾದ್ಯಂತ ಕಾರ್ಮಿಕರ ವಿವಿಧ ವಿಭಾಗಗಳು ಹಲವು ಹೋರಾಟಗಳನ್ನು ನಡೆಸಿದ್ದರು. ಇವುಗಳಲ್ಲಿ ಬಹಳಷ್ಟು ದೀರ್ಘಕಾಲ ನಡೆದ ಹೋರಾಟಗಳು. ಬಂಡವಾಳಶಾಹಿಗಳು ಹಾಗೂ ಸ್ವತಃ ಸರಕಾರ ಜಾರಿಮಾಡಬೇಕಾದ ಒಪ್ಪಂದವನ್ನು ಪರಿಪಾಲಿಸದೇ ಇದ್ದುದರಿಂದಾಗಿ ಅಲವು ಹೋರಾಟಗಳು ನಡೆದವು. ಇನ್ನು ಹಲವು ಕಡೆ ಇಂಟಕ್‌ನ 'ಚಮಚಾ ಯೂನಿಯನ್'ಗಳೊಂದಿಗೆ ಮಾಡಿಕೊಂಡ ಕಾರ್ಮಿಕರಿಗೆ ಘಾತ ಬಗೆಯುವ ಒಪ್ಪಂದಗಳನ್ನು ವಿರೋಧಿಸಿ ಹೋರಾಟಗಳು ನಡೆದವು. ಇಂಥ ಎಲ್ಲಾ ಸಂದರ್ಭಗಳಲ್ಲಿ ಖಾಸಗೀ ಮಾಲಕರ ಗೂಂಡಾ ಪಡೆಗಳ, ಸರಕಾರೀ ಪೋಲೀಸ್ ಪಡೆಗಳ ಹಾಗೂ ಕಾಂಗ್ರೆ ಬೆಂಬಲಿಗ ಇಂಟಕ್ ಚಮಚಾ ಪಡೆಗಳ ದಾಳಿಗಳನ್ನು ಕಾರ್ಮಿಕರು ಧೀರತನದಿಂದ ಎದುರಿಸಿದ್ದರು. ಬಂಡವಾಳಶಾಹಿಗಳು, ಗುತ್ತೇದಾರಿಗಳು ಹಾಗೂ ಬಹುರಾಷ್ಟ್ರೀಯ ಶೋಷಕರ ಮನವೊಲಿಸಲು ಇಂದಿರಾ ಸರ್ಕಾರ ತಂದಿರುವ ಎನ್.ಎಸ್.ಎ., ಇ.ಎಸ್.ಎಂ.ಎ.ಗಳ ವಿರುದ್ಧ ರಾಜ್ಯವ್ಯಾಪೀ, ರಾಷ್ಟ್ರವ್ಯಾಪೀ ಪ್ರಬಲ ಪ್ರತಿಭಟನೆಗಳು ವ್ಯಕ್ತಪಟ್ಟಿವೆ. ಹೀಗಿದ್ದರೂ ತನ್ನದು ಕಾರ್ಮಿಕವರ್ಗದ ಹಿತರಕ್ಷಕ ಸರಕಾರ, ಕಾರ್ಮಿಕವರ್ಗ ತನ್ನ ಬೆನ್ನ ಹಿಂದಿದೆ ಎಂದು ನಾಚಿಕೆ ಇಲ್ಲದೇ ಹೇಳಿಕೊಳ್ಳುತ್ತಿದ್ದ ಸರ್ಕಾರದ ಮುಖಕ್ಕೆ ಬಲವಾಗಿ ಉಗುಳುವ ದಿನವಾಯಿತು ಈ ಜನವರಿ 19ರ ಮಹಾಮುಷ್ಕರ.

ದೇಶವನ್ನು ಅವಿರತ ಕೊಳ್ಳೆ ಹೊಡೆಯುತ್ತ ಬಂದಿರುವ ಬಂಡವಾಳಗಾರರ ಹಿತರಕ್ಷಕ ಸರಕಾರ ಶ್ರೀ ಸಾಮಾನ್ಯನ ಬೇಡಿಕೆಗಳಿಗೆ ಕಿವಿಗೊಟ್ಟಿಲ್ಲ. ದೇಶದ ಉತ್ಪಾದನೆಯ ಬೆನ್ನೆಲುಬಾಗಿರುವ ರೈತಕಾರ್ಮಿಕರು ಅರೆಹೊಟ್ಟೆಯಿಂದ ಬದುಕುತ್ತಿದ್ದಾರೆ. ತಮ್ಮ ಹೀನಾಯಮಾನ ಬದುಕಿಗೆ ಕಾರಣವಾದ ಪರಿಸ್ಥಿತಿಯ ವಿರುದ್ಧ ಪ್ರತಿಭಟಿಸಿದರೆ 'ರಾಷ್ಟ್ರದ್ರೋಹಿ'ಗಳೆಂಬ ಬಿರುದು!

ಈ ದೇಶವನ್ನು 34 ವರುಷಗಳಿಂದ ಪ್ರಪಾತದೆಡೆಗೆ ತಳ್ಳುತ್ತಿದ್ದು, ಶ್ರೀ ಸಾಮಾನ್ಯನ ಬದುಕನ್ನು ಅಸಹನೀಯ ಮಾಡಿ, ದೇಶೀಯ ಮತ್ತು ವಿದೇಶಿ ಗುತ್ತೆದಾರಿಗಳಿಗೆ ದೇಶವನ್ನು ದೋಚಲು ಅವಕಾಶಮಾಡಿಕೊಟ್ಟು, ಆಡಳಿತದ ಪ್ರತಿಯೊಂದು ಹಂತದಲ್ಲೂ ಭ್ರಷ್ಟಾಚಾರ ತುಂಬಿತುಳುಕುವ ಪರಿಸ್ಥಿತಿಗೆ ಕಾರಣರಾಗಿ, ತಮ್ಮ ಬಂಡಗಳನ್ನು ಭದ್ರಪಡಿಸಿಕೊಳ್ಳಲು ಪೋಲೀಸ್, ಗೂಂಡಾ ಪಡೆಗಳನ್ನು ಅಮಾಯಕ ರೈತಕಾರ್ಮಿಕರ ಮೇಲೆ ಹರಿಬಿಡುತ್ತಿರುವವರೇ ನಿಜವಾದ ದೇಶದ್ರೋಹಿಗಳು.

ದೇಶವನ್ನು ದಿವಾಳಿಖೋರ ಪರಿಸ್ಥಿತಿಗೆ ತಂದು, ದೇಶದ ಸ್ವಾತಂತ್ರ್ಯ-ಸಾರ್ವಭೌಮತೆಯನ್ನು ವಿದೇಶಗಳಿಗೆ ಒತ್ತೆಇಟ್ಟು ಭಿಕ್ಷಾಪಾತ್ರೆ ಹಿಡಿದಿರುವವರು ಸಮಸ್ಯೆಗಳನ್ನು ನೇರವಾಗಿ ಎದುರಿಸುವ, ವಿವೇಚಿಸುವ ಅರ್ಹತೆ ಹೊಂದಿಲ್ಲ. ಆಳುವವರ ಬೋಗಸ್ ಆಶ್ವಾಸನೆಗಳಿಂದ ಭ್ರಮ ನಿರಸನಕ್ಕೊಳಗಾದ ದೇಶದ ಜನತೆ ಪ್ರತಿಭಟಿಸಿದರೆ ತಪ್ಪೇ?

ಈ ಮಹಾಮುಷ್ಕರ ದೇಶದ ಕಾರ್ಮಿಕವರ್ಗದ ಐಕ್ಯ ಕಾರ್ಯಾಚರಣೆಗೆ ನಾಂದಿ. ಸರಕಾರದ ಕರಾಳ ಕಾನೂನುಗಳು, ಬೆಲೆ ಏರಿಕೆ, ರೈತನು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಮುಂತಾದ ಬೇಡಿಕೆಗಳಿಗೋಸ್ಕರ ಹೋರಾಟ ಮುಂದುವರಿಯಬೇಕು.

ರಾಷ್ಟ್ರೀಯ ಭದ್ರತಾ ಶಾಸನವನ್ನು ಸಮಾಜದ್ರೋಹಿಗಳ ವಿರುದ್ಧ ಮಾತ್ರ ಬಳಸಲಾಗುವದೆಂಬ ಸರಕಾರದ ಆಶ್ವಾಸನೆ ಹುಸಿಯಾಗಿದೆ. ದೇಶದ ನಿಜವಾದ ಸಂಪತ್ತಾದ ರೈತಕಾರ್ಮಿಕರನ್ನು ಪ್ರತಿನಿಧಿಸುತ್ತಿರುವ ಮುಖಂಡರನ್ನು ಇದೇ ರಾಷ್ಟ್ರೀಯ ಭದ್ರತಾ-ಶಾಸನದನ್ವಯ ಬಂಧಿಸಿದ್ದಾರೆ. ಕೊನೆಗೂ ಸರಕಾರದ ನಿಜಬಣ್ಣ ಹೊರಬಿದ್ದಿತು.

ದೇಶದ ಕಾರ್ಮಿಕವರ್ಗ, ರೈತವರ್ಗ, ವಿದ್ಯಾರ್ಥಿ-ಯುವಜನರು, ಮಹಿಳೆಯರು ಮತ್ತು ಶ್ರೀ ಸಾಮಾನ್ಯರು ಈ ಮಹಾ ಮುಷ್ಕರವನ್ನು ಬೆಂಬಲಿಸಿದ್ದರು. ದುಡಿಯುವ ವರ್ಗವನ್ನು ಬೆಂಬಲಿಸುವ ಪ. ಬಂಗಾಲ, ತ್ರಿಪುರಾ ರಾಜ್ಯ ಸರಕಾರಗಳು ಈ ಮಹಾ ಮುಷ್ಕರಕ್ಕೆ ಬೆಂಬಲಿಸಿದ್ದವು.

ಈ ಮುಷ್ಕರ ನಡೆದ ಸಂದರ್ಭದಲ್ಲಿ ವಿಶ್ವಬ್ಯಾಂಕ್ ಅಧ್ಯಕ್ಷರು ಭಾರತದಲ್ಲಿ ಇದ್ದರು. ಅವರನ್ನು ಮೆಚ್ಚಿಸಲು ನಮ್ಮ ಘನ ಸರಕಾರ ಈ ಮಹಾಮುಷ್ಕರ ಹತ್ತಿಕ್ಕಲು ಸನ್ನದ್ಧವಾಗಿದ್ದೇ ಅಲ್ಲದೆ ಎಲ್ಲ ರಾಜ್ಯ ಸರಕಾರಗಳಿಗೂ ಸ್ಪಷ್ಟ ಸೂಚನೆಗಳನ್ನೂ ನೀಡಲಾಗಿತ್ತು. ಇಂಟಕ್(ಐ) ಸಂಘಟನೆಗಳಿರುವ ಕೆಲವು ಕೈಗಾರಿಕೆಗಳಲ್ಲಿ ಮಾತ್ರ ಕೆಲಮಟ್ಟಿಗೆ ಕೆಲಸ ನಡೆಯಿತು. ಹೆಚ್ಚಿನಂಶ ಇಂಟಕ್ (ಐ) ಸಂಘಟನೆಗಳಡಿಯಲ್ಲಿರುವ ಕಾರ್ಮಿಕರೂ ಮುಷ್ಕರಕ್ಕೆ ಓಗೊಟ್ಟಿದ್ದರು.

ಬ್ಯಾಂಕ್‌ಗಳು, ಜೀವವಿಮೆ ಮತ್ತು ಸಾಮಾನ್ಯವಿಮೆ ಮೊದಲಾದ ಸಂಸ್ಥೆಗಳ ನೌಕರರು ಸಂಪೂರ್ಣವಾಗಿ ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ದೇಶಾದ್ಯಂತ ಹೆಚ್ಚಿನಂಶ ವಾಣಿಜ್ಯ, ವ್ಯವಹಾರ ಪೇಟೆಗಳು, ಹೋಟೆಲ್ ಮತ್ತು ಚಿತ್ರಮಂದಿರಗಳು ಬಹುತೇಕ ಬಂದಾಗಿದ್ದವು.

ಉತ್ತರ ಪ್ರದೇಶ, ಪ. ಬಂಗಾಲ್ ಮತ್ತು ತಮಿಳುನಾಡುಗಳಲ್ಲಿ ಮುಷ್ಕರನಿರತ ಕಾರ್ಮಿಕರೊಂದಿಗೆ ಕಾಂಗ್ರೆಗಳು ಘರ್ಷಣೆಗೆ ಇಳಿದಿದ್ದರಿಂದ ಗೋಲೀಬಾರ್ ನಡೆದು 10 ಜನರು ಸಾವನ್ನಪ್ಪಿದ್ದಾರೆ. ಕೆಲವೆಡೆ ಲಾಠೀ ಚಾರ್ಜು ನಡೆದಿದೆ. ಸಹಸ್ರಾರು ಜನರನ್ನು ಬಂಧಿಸಲಾಗಿದೆ.

ಎಲ್ಲಾ ರೀತಿಯ ಬೆದರಿಕೆ, ದಬ್ಬಾಳಿಕೆ, ಪ್ರಚೋದನೆಗಳಿಗೆ ಮಣಿಯದೇ ಸಂಪೂರ್ಣ ಶಾಂತರೀತಿಯಿಂದ ಮುಷ್ಕರ ಯಶಸ್ವಿಮಾಡಿದ ದೇಶದ ಸಮಸ್ತ ಕಾರ್ಮಿಕರೂ ಅಭಿನಂದನೆಗೆ ಪಾತ್ರರು.

ಕರ್ನಾಟಕದಲ್ಲೂ ಮಹಾ ಮುಷ್ಕರ ಸಂಪೂರ್ಣ ಯಶಸ್ವಿಯಾಗಿದೆ. ಮುಷ್ಕರ ಯಶಸ್ವಿ ಮಾಡಿದ ನಾಡಿನ ಕಾರ್ಮಿಕವರ್ಗಕ್ಕೆ ಸಹಕರಿಸಿದ ಜನಸಾಮಾನ್ಯರಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಸಿ. ಐ. ಟಿ. ಯು. ರಾಜ್ಯಸಮಿತಿ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದೆ.

●

ರೈತ ಸಮ್ಮೇಳನಕ್ಕೆ ಸಿದ್ಧತೆ

1982 ಮಾರ್ಚ್ 11,12,13 ಮತ್ತು 14ರಂದು ಕೋಲಾರ ಜಿಲ್ಲೆಯ ಮುಳಬಾಗಿಲುನಲ್ಲಿ ಕರ್ನಾಟಕ ಪ್ರಾಂತ ರೈತಸಂಘದ ನಾಲ್ಕನೇ ರಾಜ್ಯಸಮ್ಮೇಳನ ನಡೆಯಲಿದೆ. ಈ ಕುರಿತು ಸಿದ್ಧತೆಗಳೂ ನಡೆದಿವೆ.

15-1-82ರಂದು ಕೋಲಾರ ಜಿಲ್ಲೆಯ ಮುಳ್ಳೂರ ಗ್ರಾಮದಲ್ಲಿ ರೈತಸಂಘದ ಕಾರ್ಯಕರ್ತರ ಸಭೆ ಸೇರಿ ಸಮ್ಮೇಳನದ ಸಿದ್ಧತೆ ಕುರಿತು ಚರ್ಚಿಸಿತು. ಪ್ರಾಂತ ರೈತಸಂಘದ ಖಜಾಂಚಿಯಾದ ಕಾಂ. ಪಿ. ಜಗನ್ನಾಥ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೋಲಾರ ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ. ಜೆ. ಡಿ. ದೊರೆಸ್ವಾಮಿಯವರೂ ಉಪಸ್ಥಿತರಿದ್ದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ. ಪಿ. ಜಗನ್ನಾಥರೂ ಸಮ್ಮೇಳನವನ್ನು ಯಶಸ್ವಿಗೊಳಿಸಲು ಮನವಿ ಮಾಡಿದರು.

●

ಸಂಪಾದಕೀಯ

(1ನೇ ಪುಟದಿಂದ)

ದೇಶದ ಜನತೆ ಬಹುಪಾಲು ಎಲ್ಲಾ ಕಡೆ ಸ್ವಯಂಪ್ರೇರಿತ ಬಂದ್ ನಡೆಸುವುದರ ಮೂಲಕ ಕಾರ್ಮಿಕವರ್ಗಕ್ಕೆ ಸೌಹಾರ್ದತೆಯನ್ನು ತೋರಿಸಿತು. ಕಾಂಗ್ರೆಯ ದಮನಕಾರಿ ನೀತಿಗೂ, ಸುಳ್ಳು ಪ್ರಚಾರಕ್ಕೂ ಉತ್ತರ ನೀಡಿತು.

ಕರ್ನಾಟಕ ರಾಜ್ಯದಲ್ಲಂತೂ ಹೆಚ್ಚುಕಡಿಮೆ ರಾಜ್ಯದ ಎಲ್ಲಾ ಕಡೆ ಬಂದ್ ಕಾರ್ಯಾಚರಣೆಯು ನಡೆದು, ಗುಂಡೂರಾವ್ ಸರಕಾರದ ದಬ್ಬಾಳಿಕೆಯನ್ನು ಎದುರಿಸಿ ಸರಿಯಾದ ಉತ್ತರ ನೀಡಲಾಯಿತು. ಕಾರ್ಮಿಕ ವರ್ಗದ ಕರೆಗೆ ವಿದ್ಯಾರ್ಥಿಗಳು, ಯುವಜನತೆ, ರೈತರು, ಮಹಿಳೆಯರು ಮತ್ತಿತರ ವಿಭಾಗದ ಜನತೆ ಬೆಂಬಲಿಸಿದ್ದು ಮುಂಬರುವ ದಿನಗಳಲ್ಲಿ ರೈತ-ಕಾರ್ಮಿಕ ಮತ್ತು ಇನ್ನಿತರೆ ಜನವಿಭಾಗದ ಐಕ್ಯತೆ ಇನ್ನೂ ಹೆಚ್ಚಿಗೆ ಬೆಳೆಯುವ ಸಂಕೇತವಾಗಿದೆ. ದುಡಿಯುವವರ್ಗಕ್ಕೆ ಮತ್ತು ಜನತೆಗೆ ಅಭಿನಂದನೆಗಳು ಸಲ್ಲಬೇಕಾಗಿದೆ.

ಇಷ್ಟೆಲ್ಲಾ ಆದರೂ ಕಾಂಗ್ರೆ ಸರಕಾರವು ತನ್ನ ಕಾರ್ಮಿಕವಿರೋಧಿ, ಪ್ರಜಾಪ್ರಭುತ್ವವಿರೋಧಿ ನೀತಿಗಳನ್ನು ಕೈಬಿಡುವುದಕ್ಕೆ ಬದಲು ಇನ್ನೂ ಕಠಿಣ ಕ್ರಮಗಳನ್ನು ಅನುಸರಿಸುವ ಲಕ್ಷಣ ಕಂಡುಬರುತ್ತಿದೆ. ದಿನೇ ದಿನೇ ಆಳವಾಗುತ್ತಿರುವ ಆರ್ಥಿಕ ಸಾಮಾಜಿಕ ಬಿಕ್ಕಟ್ಟಿನ ಹಿನ್ನೆಲೆ ಮತ್ತು ಐ. ಎಂ. ಎಫ್. ಸಾಲದ ಷರತ್ತುಗಳ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಜನರ ಜೀವನಮಟ್ಟದ ಮೇಲೂ, ಪ್ರಜಾಪ್ರಭುತ್ವ ಹಕ್ಕುಗಳ ಮೇಲೂ ಇನ್ನೂ ಹೆಚ್ಚಿನ ಆಕ್ರಮಣ ನಡೆಯುವುದು ನಿಶ್ಚಿತ. ಜನವರಿ 19ರ ಯಶಸ್ವೀ ಮುಷ್ಕರವು ಮುಂಬರುವ ಧಾಳಿಗಳನ್ನು ಎದುರಿಸುವುದರಲ್ಲಿ ಒಂದು ಮಹತ್ವದ ಹೆಜ್ಜೆ. ಇದು ಯಶಸ್ವಿಯಾಗಿರುವುದು ಸರ್ವಾಧಿಕಾರಿ ವಿರೋಧಿ ಶಕ್ತಿಗಳು ಸಂತಸಪಡತಕ್ಕ ವಿಚಾರ.

●

'ಮುನ್ನೋಟ'ಕ್ಕೆ ಅಕಾಡೆಮಿ ಪ್ರಶಸ್ತಿ

ಡಾ|| ಜಿ ರಾಮಕೃಷ್ಣರ ಲೇಖನ ಸಂಕಲನವಾದ 'ಮುನ್ನೋಟ' ಕೃತಿಗೆ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.


ಅಲ್ಲದೇ ನಿಸ್ಸಾರ ಅಹಮ್ಮದ್‌ರ 'ಇದು ಬರಿ ಬೆಡಗಲ್ಲೋ ಅಣ್ಣ' (ವಿಮರ್ಶೆ) ಕೃತಿಗೆ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಈ ಕೃತಿಗಳನ್ನು ಸೇರಿ ಒಟ್ಟು 15 ಕನ್ನಡ ಪುಸ್ತಕಗಳಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಡಾ|| ಜಿ. ಆರ್. ನಿಸ್ಸಾರ ಅಹಮ್ಮದ್ ಮತ್ತಿತರರನ್ನು ಐಕ್ಯರಂಗ ಅಭಿನಂದಿಸುತ್ತದೆ.

○

ಕಾಂ. ಚಂದ್ರು ನಿಧನ



ಎಸ್. ಎಫ್. ಐ.ನ ಬೆಂಗಳೂರು ನಗರ ಸಮಿತಿಯ ಸಕ್ರಿಯ ಕಾರ್ಯಕರ್ತರಲ್ಲಿ ಒಬ್ಬರಾಗಿದ್ದ ಕಾಮ್ರೇಡ್ ಚಂದ್ರಶೇಖರ ಜನವರಿ 11ರಂದು ಬೆಂಗಳೂರಿನ ಕೆ. ಸಿ. ಜನರಲ್ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಬೆಂಗಳೂರಿನ ಸರಕಾರಿ ವಿಜ್ಞಾನ ಕಾಲೇಜಿನ ಎಸ್.ಎಫ್.ಐ. ಘಟಕದ ಸಹಸಂಚಾಲಕರಾಗಿದ್ದ ಕಾಂ. ಚಂದ್ರುರವರ ನಿಧನಕ್ಕೆ ಎಸ್.ಎಫ್.ಐ. ರಾಜ್ಯ ಮತ್ತು ಬೆಂಗಳೂರು ಜಿಲ್ಲಾ ಘಟಕಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT